...ಹ್ಯೂ ಪ್ರಕಟನಾಲಯ
...ವಿಶ್ವೇಶ್ವರಪುರ, ಬೆಂಗಳೂರು ೪

ಪುರಾಣಮಾಲಿಕೆ

ଶ୍ରୀଯୁକ୍ତ [illegible] [illegible] [illegible]ନାରାୟଣ [illegible]
[illegible] [illegible] [illegible]
ଭାରତ

ನನ್ನ ಮಾವ



ವಿದ್ವಾನ್ ತಿರುಮಲೆ ವೆಂಕಟಾಚಾರ್ಯ

ಮಹಾಸತಿ

'ಭಾರತೀ'

ನೆಹ್ರೂ ಪ್ರಕಟನಾಲಯ
ವಿಶ್ವೇಶ್ವರಪುರ, ಬೆಂಗಳೂರು ೪

ವಸ್ತು ಪರಿಚಯ

ನುಗು ನಾಡಧಿಪತಿ ರವಿಗ. ರವಿಗನ ಮಗಳು ದೇಕಬ್ಬೆ. ಪೊನ್ನಬ್ಬೆ ದೇಕಬ್ಬೆಯ ತಾಯಿ. ನವಿಲ ನಾಡಧಿಪತಿ ಏಚ. ಏಚನೇ ದೇಕಬ್ಬೆಯ ಪತಿ.

ಎರೆಯಂಗನು ಏಚನ ದಾಯಾದಿ. ಇಬ್ಬರೂ ಸಮವಯಸ್ಕರು; ಸಮಬಲರು. ಒಂದೇ ಗರಡಿಯಲ್ಲಿ ಕಲಿತ ಕಲಿಗಳು; ಜಗಜಟ್ಟಿಗಳು. ಪರಮ ವಿಶ್ವಾಸಿಗಳು ಎಳೆತನದಲ್ಲಿ. ಬೆಳೆಬೆಳೆಯುತ್ತ ಬೇರೆಯಾದರು. ವೈರ ಬೆಳಸಿದರು. ಕಾರಣವಲ್ಪ. ವೈರಭಾವವು ಇಬ್ಬರ ವಿವೇಕವನ್ನೂ ನುಂಗಿತು.

ತಲಕಾಡಿನ ಚೋಳನು ರಾಜಾಧಿರಾಜ. "ಮಲ್ಲ ಯುದ್ಧವು ಸಲ್ಲ" ದೆಂದು ರಾಜಾಜ್ಞೆ ಮಾಡಿದ್ದನು. ಆಜ್ಞೆ ಮೀರಿ ನಡೆದವರಿಗೆ ಮರಣವೇ ಶಿಕ್ಷೆಯೆಂದು ವಿಧಿಸಿದ್ದನು. ವೈರಮತ್ತ ಜಟ್ಟಿಗಳು ರಾಜಾಜ್ಞೆ ಮೀರಿ ಹೋರಾಡಿದರು. ಎರೆಯಂಗನು ಬಿದ್ದನು. ಏಚನೇನು ಗೆದ್ದನೆ? ಇಲ್ಲ. ರಾಜಭಟರು ಅವನನ್ನು ತಲೆಕಾಡಿಗೊಯ್ದರು. ರಾಜನು ಮರಣ ದಂಡನೆ ವಿಧಿಸಿದನು. ವೀರರಿಬ್ಬರೂ ವೈರಕ್ಕೆ ಬಲಿಯಾದರು.

ದೇಕಬ್ಬೆಗೆ ಪತಿಯ ಮರಣವಾರ್ತೆ ಬಂತು. ವೀರಸತಿಗೆ ಉಚಿತವಾದ ಮಾರ್ಗವನ್ನು ಹಿಡಿದಳು. ತನ್ನವರು ಏಚನ ದೇಹವನ್ನು ತಂದರು. ಮಹಾ ಚಿತೆಯನ್ನೊಡ್ಡಿದರು. ದೇಕಬ್ಬೆಯು ತಂದೆ ತಾಯಿಗಳ, ಬಂಧುಮಿತ್ರರ, ತಾಯ್ನಾಡಿನ, ಅನುಮತಿ ಪಡೆದು, ಚಿತೆಯೇರಿ, ಸ್ವರ್ಗ ಸೇರಿದಳು.

ಆಕೆಯ ಬಂಧು ಬಳಗವೆಲ್ಲ ಸೇರಿ ಆ ವೀರ ವಸ್ತುವನ್ನು ಸ್ಥಾಪಿಸಿದರು. ಮಹಾಕವಿ ಮಲ್ಲನು ವೀರ ಸತಿ-ಪತಿಗಳ ಪ್ರಶಸ್ತಿಯನ್ನು ಹಾಡಿ, ಶಾಸನವನ್ನು ನಿರ್ಮಿಸಿದನು. ಇದು ವಸ್ತುಕ.

ಪಾತ್ರಗಳ ಪರಿಚಯ

೧.	ರವಿಗ	—	ನುಗುನಾಡಿನ ಅಧಿಪತಿ
೨.	ಏಚ	—	ನವಿಲೆನಾಡಿನ ಅಧಿಪತಿ
೩.	ದಂಡನಾಯಕ	—	ನವಿಲೆನಾಡು
೪.	ದೇಕಬ್ಬೆ	—	ರವಿಗನ ಮಗಳು, ಏಚನ ಸತಿ
೫.	ನೀಲಬ್ಬೆ	—	ದೇಕಬ್ಬೆಯ ಗೆಳತಿಯರು
೬.	ಮಲ್ಲಬ್ಬೆ		
೭.	ಪೊನ್ನಬ್ಬೆ	—	ದೇಕಬ್ಬೆಯ ತಾಯಿ

ಚಾರ, ಬಂಧುಗಳು, ಮಲ್ಲಕವಿ, ಮುನಿವರ ಸಿಂಗ, ಮೊದಲಾದವರು.

ಬೆಲೆ ೧ ರೂ

ಮುನ್ನುಡಿ

ಸೋದರಿ ತಿರುಮಲೆ ರಾಜಮ್ಮನವರು ಕನ್ನಡ ಸಾಹಿತ್ಯಕ್ಕೆ ಈಗ ಹೊಸತಾಗಿ ಕಾಲಿಟ್ಟವರೇನಲ್ಲ. ಅವರ ಹಲವಾರು ಗೀತಗಳೂ 'ತಪಸ್ವಿನೀ' ಎಂಬ ನಾಟಕವೂ ಈಗಾಗಲೆ ಅವರಿಗೆ ಕೀರ್ತಿ ತಂದಿವೆ. ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರ ಪತ್ನಿಯಾದ ಅವರು ನಾಡಿನ ಹಲವಾರು ಉತ್ಸವಗಳಲ್ಲಿ ಭಾಗವಹಿಸಿದ್ದಾರೆ. ವೀಣಾ ವಾದನದಿಂದ ಕೂಡ ಆನಂದ ವನ್ನು ಊಡಿದ್ದಾರೆ. ದಂಪತಿಗಳಿಬ್ಬರೂ ಖ್ಯಾತರಾಗಿ ನಾಡಸೇವೆ ಮಾಡುವ ಪುಣ್ಯ, ಈ ಇಬ್ಬರ ಒಡಬಾಳಿನ ಒಂದು ಚೆಲುವು. ಮಹಾಸತಿ ದೇಕಬ್ಬೆ-ಯನ್ನು ಕುರಿತು ಒಂದು ಸಣ್ಣ ನಾಟಕವನ್ನು ಬರೆದು ಈಗ ಒಂದು ಹೊಸ ಕಾಣಿಕೆಯನ್ನು ತೆರುತ್ತಿದ್ದಾರೆ ಕನ್ನಡಕ್ಕೆ. ತಾಯ್ನುಡಿ ಇವರಿಗೆ ಕನ್ನಡವಲ್ಲ ವಾದರೂ ತಾಯ್ನುಡಿ ಬೇರೆಯಾದ ಇಂಥ ಹಲವರ ಪ್ರೀತಿಯಿಂದ ಕನ್ನಡಕ್ಕೆ ಬಹುವಾದ ಕಳೆ, ಸಂಪತ್ತಿ ಬಂದಿವೆ. ಇವರ ಬದುಕಿನಲ್ಲಿಯೂ ಇತರ ಕೃತಿಗಳಲ್ಲಿಯೂ ನಾಡು ಯಾವ ಗುಣಗಳನ್ನು ಕಂಡಿದೆಯೊ ಅವು ಇದರಲ್ಲಿಯೂ ಕಾಣುತ್ತವೆ. ಸೌಂದರ್ಯ, ಶುಚಿ, ನಿಷ್ಠೆ, ಬಾಳಿನ ತೀವ್ರತೆ— ಲಲಿತವಾಗಿ, ಅರ್ಥವತ್ತಾಗಿ ಬರೆವ ರೀತಿ ಅವು ಈ ನಾಟಕದಲ್ಲಿ ಕಾಣುತ್ತವೆ.

ರವೀಂದ್ರ ನಾಥ ಠಾಕೂರರು ಕವಿಯ ಅನಾದರ ಎಂಬ ಲೇಖನ ಮಾಲೆಯಲ್ಲಿ ಬಾಣ ಕಾದಂಬರಿಯ ಪತ್ರಲೇಖೆಗೂ ರಾಮಾಯಣದ ಊರ್ಮಿಳೆಗೂ ಆಗಿರುವ ಅನ್ಯಾಯವನ್ನು ಕುರಿತು ಜನರ ಸಹಾನು ಭೂತಿಯನ್ನು ತೆರೆದಿದ್ದಾರಲ್ಲವೆ! ಊರ್ಮಿಳೆಯ ಸ್ಥಿತಿ ಚಿತ್ರವನ್ನು ಶ್ರೀಮತಿ ರಾಜಮ್ಮನವರು, 'ತಪಸ್ವಿನಿ' ಯಲ್ಲಿ ೨೦-೨೫ ವರ್ಷಗಳಿಗೆ ಹಿಂದೆ ಕನ್ನಡಿ-ಗರಿಗೆ ಪರಿಚಯ ಮಾಡಿಕೊಟ್ಟರು. ಶರ್ಮರು ಪ್ರಾಕ್ತನ ಸಂಶೋಧನದಲ್ಲಿ ನುರಿತವರು. ಅವರು ಶಾಸನಗಳನ್ನು ಓದುತ್ತ, ವಿವರಿಸುತ್ತ, ಅವಕ್ಕೆ ಬೆಲೆ ಕಟ್ಟುತ್ತ ಇರುವಾಗ ಹೆಗ್ಗಡದೇವನಕೋಟೆಯ ಒಂದು ಶಾಸನದಲ್ಲಿನ ವೀರ-ಸತಿ ದೇಕಲೆಯ ಶುಚಿ ವೀರವು ಇವರ ಕುಟುಂಬದ ಮನಸ್ಸಿಗೆ ತಟ್ಟಿರಬೇಕು. ಇಂಥ ಮಹಾಸತಿಯರ ಕಥೆ ಕನ್ನಡ ನಾಡಿನ ಅತಿಶಯಗಳಲ್ಲಿ ಒಂದು.

ಕಥೆಯಲ್ಲಿನ ನೋವು, ಮೊನೆ ಅತೀವವಾದುವು. ಈ ನಾಟಕಕ್ಕೆ ಪ್ರಸ್ತಾ-ವನೆಯಾಗಿ ಆ ಶಾಸನವನ್ನೂ ಅಚ್ಚು ಮಾಡಿದ್ದಾರೆ. ಆ ಮುಂಚೆಯೇ ಮೊದಲಲ್ಲಿ— ತಮ್ಮ ಈ ಕೃತಿಯನ್ನು ತಮ್ಮ ಪ್ರೀತಿಯ ಸೋದರ ಮಾವಂದಿರಿಗೆ ಅರ್ಪಣೆ ಮಾಡಿ ಅವರನ್ನು ಕುರಿತು ಒಂದು ಕವಿತೆಯನ್ನು ಬರೆದಿದ್ದಾರೆ. ಮುಂದಿನದು ನಾಟಕ. ಈ ಪದ್ಯ ನಾಟಕದಲ್ಲಿ ಸಾಲುಗಳ ಓಟ, ಬನಿ ಹಿಂದಿನ ಇವರ ಕೃತಿಗಳಲ್ಲಿನವಕ್ಕಿಂತ ಕುದುರಿವೆ. ಮನಸ್ಸಿನ ಆಳ, ಲೋಕಾನುಭವಗಳ ತುಂಬು ನೋಟ, ಪಾತ್ರಗಳ ಬಾಯಲ್ಲಿ ನುಡಿಯುತ್ತವೆ.

ಮಹಾಸತಿಯರ ಬದುಕು ದೊಡ್ಡ ನಿರ್ಧರದ್ದು: ಅಷ್ಟೇ ಮಟ್ಟಿಗೆ ಮೃದು, ಕೋಮಲ. ಅವರ ಆತ್ಮಾರ್ಪಣ, 'ಶುಭ ಸಂಭ್ರಮ' ಮನಸ್ಸನ್ನು ಮರುಗಿಸುತ್ತವೆ. ರಾಜಾಜ್ಞೆಯನ್ನು ಮೀರಿದ ಏಚರಸನು ತಲೆ ದಂಡವನ್ನು ತೆತ್ತನಾದರೂ ಆತನ ಹಿರಿಮೆ ಸಾಮಾನ್ಯವಾದ್ದಲ್ಲ. ಹಿಂದಿನ ದಿನ ಕೆಟ್ಟ ಕನಸುಗಳನ್ನು ಕಂಡು ಕಳವಳಗೊಂಡ ಆತನ ಹೆಂಡತಿಗೆ ಎರಡನೆಯದಿನ ತನ್ನ ದಂಡನಾಯಕನ ಬಾಯಿಂದ ಸಂಗತಿ ತಿಳಿಯ ಬರುತ್ತದೆ. ತನ್ನ ದುಃಖವನ್ನು ತೋಡಿಕೊಳ್ಳುವಳು. ತನ್ನಂಥವಳಿಗೆ ಉಳಿದ ಭಾಗ್ಯ, ಧರ್ಮ ಒಂದೇ— ಪತಿಯೊಡನೆ ಸದ್ಗತಿಗೆ ನಡೆವುದು. ಹಾಗೆ ನಿಶ್ಚಯಿಸಿ ಗೆಳತಿಯರು, ತಾಯ್ತಂದೆಯರು, ಊರವರು ಎಷ್ಟು ಬಗೆಯಾಗಿ ನಿವಾರಿಸಿ-ದರೂ ತಡೆಯದೆ ಚಿತಾರೋಹಣ ಮಾಡಿದಳು. ಆಕೆಗೆ ಅದು ಮಹಾ ಯಾತ್ರೆ. ಸಾಮಾನ್ಯರಿಗೆ ಲಭ್ಯವಲ್ಲದಷ್ಟು ದೊಡ್ಡತನ ಆಕೆಯದು. ಸಾಮಾಜಿಕ ಸಂಪ್ರದಾಯವಾಗಿ 'ಸತೀ' ಹೆಣ್ಣಿನ ಬದುಕಿಗೆ ಎಷ್ಟು ಗಾಸಿಯನ್ನು ತಂದಿತೋ ಅದನ್ನು ಓದಿ ಕೇಳಿ ಅರಿತವರಿಗೆ ಈ ಚಿತ್ರದ ಕಾಂತಿ ಉಜ್ವಲವಾಗಿ ಕಾಣಿಸುವುದು. ತಾನಾಗಿ ಒಲಿದ ಆಯ್ದ ಈ ಸಾವಿನ ಹಿರಿಮೆ ನಮ್ಮನ್ನು ಮೂಕರನ್ನಾಗಿಸುತ್ತದೆ. ಆ ಹಿರಿಮೆಯ ಸ್ವರೂಪವನ್ನು ಶ್ರೀಮತಿಯವರು ಚೆನ್ನಾಗಿ ಕಾಣಿಸಿದ್ದಾರೆ.

ದೇಕಲೆಯ ಇಬ್ಬರು ಗೆಳತಿಯರು ಮಲ್ಲಬ್ಬೆ, ನೀಲಬ್ಬೆ. ಎರಡು ದೃಷ್ಟಿ, ಎರಡು ಗುಣ ಪಕ್ಷಪಾತ, ಲೋಕಾಭಿಪ್ರಾಯದ ಎರಡು ಮುಖಗಳನ್ನು ಕಾಣಿಸುವವರು. ನೀಲಬ್ಬೆಯ ತಿಳಿವಳಿಕೆ ಹದವಾದ್ದು.

ಬಹುತರ ಆಕೆಯ ಪ್ರಜ್ಞೆಯ ನೆಲಸಿನಲ್ಲಿ ಈ ನಾಟಕದ ಮುಖ್ಯ ಬೆಲೆ ಕಟ್ಟಿ ನಿಂತೀತು. ಅದಕ್ಕೆ ವಿಶ್ವಾಸ ತಂದೀತು.

ವೀರ ಧರ್ಮವು ತ್ಯಾಗ. ಅದರ ಕರ್ಮವು ಸೇವೆ
ವೀರ ರೌದ್ರಾರ್ಯದಲೆ ಜಗದ ಕ್ಷೇಮವಿದೆ—

ಎಂದ ಆಕೆಯ ಮಾತಿನಲ್ಲಿ ವಿವೇಕ ಇದೆ. ಕಲಿಕಾಲ ಕರ್ಣನೆಂದು ಹೆಸರಾದ ಏಚಮರಸನು ತನ್ನ ಕೀರ್ತಿಗೆ ಒಪ್ಪುವಂತಹ ಕಾರ್ಯ ಮಾಡಿದ್ದಾನೆ. ಆತನ ಪವಿತ್ರಮುದ ಸಾವಿಗೆ ಕಾಣಿಕೆ ಯೆಂಬಂತಿದೆ—ದೇಕಲೆಯೇ ಆಡುವ ಈ ಮಾತು:

ಗೆದ್ದರೇ ನಿದ್ದಪರೆ? ಬಿದ್ದರೇ ನಳಿದಪರೆ?
ಬಿದ್ದವರ ತ್ಯಾಗದಲಿ ಉದ್ಧಾರವಾಯ್ತು ಜಗ.

'ತ್ಯಾಗ'—ಇಲ್ಲಿನ ಸಾರ ಮರ್ಮದ ಮಾತು. ನೀಲಬ್ಬೆ ದೇಕಲೆಯರ ಹೃದಯ ಸಾಮರಸ್ಯದ ಪ್ರತೀಕವಾಗಿದೆ ಅದು. ಮಲ್ಲಬ್ಬೆಯ ಮನಸ್ಸು ತುಂಬಾ ಮೃದು. ಅದಕ್ಕೆ ಕರ್ಕಶತೆ ಒಪ್ಪದು, ಸಹಿಸದು. ನೀಲಬ್ಬೆಯ ತಿಳಿವು ಕಲ್ಯಾಣ ಗರ್ಭವಾದ್ದು. ದೊಡ್ಡ ಮನಸ್ಸಿನ ನೋವನ್ನು ಅರ್ಥ ಮಾಡಿಕೊಂಡು ತಾಳಿಕೊಳ್ಳುವ ಶಕ್ತಿ ಸ್ಥೈರ್ಯ ಉಳ್ಳದ್ದು. ಮಲ್ಲಬ್ಬೆಯ ಅಂತಃಕರಣ ಸಾಧಾರಣ ಮಾನವತೆಯದು. ದೇಕಲೆಯ ಮನಸ್ಸು, ಸೆಲೆ, ವಿಲಾಸ, ಪ್ರೇಮ ಸಂಪತ್ತಿಗಳನ್ನು ನಾಟಕವನ್ನು ಓದಿಯೇ ತಿಳಿಯಬೇಕು.

ಮಲ್ಲಬ್ಬೆ ನೀಲಬ್ಬೆಯರ ಆರಂಭ ಸಂಭಾಷಣೆಯಲ್ಲಿ ಬರುವ ನಿಶಿ ಶಶಿಯರ ಸ್ವರೂಪ ಬಾಂಧವ್ಯಗಳ ರೂಪಣ ಚೆನ್ನಾಗಿದೆ.

ಸಹೃದಯರಾದ ಕನ್ನಡಿಗರು ಈ ಕೃತಿಯನ್ನು ಪ್ರೀತಿಯಿಂದ ಬರಮಾಡಿಕೊಂಡಾರೆಂದು ನಂಬಿದ್ದೇನೆ. ಇವರ ಇತರ ಗೀತೆಗಳೂ ಲೇಖನಗಳೂ ಬೇಗ ಹೊರಕ್ಕೆ ಬರುವಂತಾಗಲಿ.

೧೬—೧—೧೯೫೭ ವಿ. ಸೀತಾರಾಮಯ್ಯ

ಮಾವನಿಗೆ

ವೇದ ವಿದ್ಯಾವಿದರು, ಸಂಗೀತ ಸಾಹಿತ್ಯ
ಕೋವಿದರು ; ಸೌಂದರ್ಯದಾನಂದ ಸಾಧಕರು.
ನಿನ್ನ ಪೂರ್ವಜರು ಧೀರೋದಾರ ಚರಿತರು.
ನೀನೊಗೆದ ವಿಮಲ ಕುಲ ಸ್ವಯಮಾಚಾರ್ಯಕುಲ.

ಕುಶಲ ವಿದ್ಯೆಯ ಕಲಿತು ನೀನು ರಸ ಶಿಶುವಾದೆ.
ನಿನ್ನ ಕಣ್ಮನವೆಲ್ಲ ಸೊಗ ಸೊದೆಯ ಮೇಲೆ
ನಿನ್ನ ಬಗೆಯೌದಾರ್ಯ, ನಿನ್ನನಂತ ಪ್ರೇಮ
ದಾದರ್ಶ ಜೀವನಕೆ ವ್ಯವಹಾರ ಜೀವನದ
ರಸ ವಿವರ್ಜಿತವೃತ್ತಿ ಕತ್ತಲೆಯ ದುರ್ಗಮನ.
ಹೊಂದಿಕೆಯು ಬರಲಿಲ್ಲ.

ಎನ್ನವರು ಪರರಿವರು
ಎನ್ನದೆಯೆ ಪುರುಳೆಲ್ಲ [illegible]ತ್ತು ಮನದಣಿಸಿದೆ.
ಉಸುರಿದ್ದ ಪರಿಯಂತ ಕಲೆಯಲ್ಲಿ ಮಿಂದೆ.
ಆನಂದರಸವೀಂಟೆ ಗೀತೆಯನು ಪಾಡಿದೆ.
ಸರಸತಿಯ ಸೇವಿಸಿದೆ ; ಸಗ್ಗಿಯಾದೆ.

ನಿನ್ನ ಪ್ರೇಮದ ತೊಟ್ಟಲಲಿ ತೂಗಿ ಲಾಲಿಸಿದೆ.
ನಿನ್ನನುಗ್ರಹ ಬಲವೆ ಬಲವೆನಗೆ; ನಾನಿಂದು
ನುಡಿವುದಕೆ, ಬರೆವುದಕೆ, ಪಾಡುವುದಕೆಲ್ಲ
ನಿನ್ನ ಕೃಪೆಯೇ ಮೂಲ. ನಾನರಿಯದಂತೆನಗೆ
ಸಂಗೀತ ಸಾಹಿತ್ಯದಭಿರುಚಿಯ ಪುಟ್ಟಿಸಿದೆ.
ಎನ್ನಾತ್ಮ ಸಂಸ್ಕಾರ ಭಾಸ್ಕರನು ನೀನಲ್ತೆ ?

ಕನ್ನಡದ ನುಡಿಯಲ್ಲಿ ನೂಲುವುದು ಕಲಿತಿಹೆನು.
ನೂತ ನೂಲಿಗೆ ಏಳು ಬಣ್ಣಗಳ ಕೊಟ್ಟಿಹೆನು.
ಲಾಳಿಯಾಟವ ನಾಡಿ, ನಯನಮೋಹಕ ಚಿತ್ರ
ಕೈವಸ್ತ್ರನೇದಿಹೆನು ಕಲೆಯ ಮಗ್ಗದಲಿ.
ಅದನು ದೇವರ ಪಾದದಡಿಯಲ್ಲಿ ಇಟ್ಟಿಹೆನು.

ಕೈವಸ್ತ್ರ ನಿನಗೆಂದು ಕೈಚಾಚಿ ನಿಂದಿಹೆನು.
ನೀ ಸುಗುಣ ನಿಧಿ! ಮಾವಾ! ಆಗುಣದ ಒಂದೆಳೆಯ
ನಿನ್ನ ಪ್ರೇಮದ ಕುಣಿಕೆ ಇಟ್ಟದಕೆ ಮುಗಿಲಿಂದ
ಇಳಿಯಬಿಡು; ಬಿಡು ಇಳೆಗೆ. ಎನ್ನಬಳಿಗದು ಬರಲಿ,
ಆ ಕುಣಿಕೆಗೀವಸ್ತ್ರ ಕಟ್ಟುವೆನು, ಸೇದಿಕೋ,
ಸೆಳೆದುಕೋ ಸ್ನೇಹದಲಿ; ಎನ್ನ ಕೈಗಾಣಿಕೆಯ.
ಎಂತಿದ್ದರೇನದು? ಕೂಸ ಕೈಗೆಲಸವದು.
ಸ್ವೀಕರಿಸು; ಕನಿಕರಿಸು; ಧನ್ಯಳೆಂದೆನಿಸೆನ್ನ.

ಕವಿರಾಜ ಬಾಂಧವ ಮಲ್ಲ

ವೃ ||
ಸ್ವಸ್ತಿ ಶ್ರೀ ಚೋಳರಾಜಂ ಸಕಳವಸುಧೆಯಂ ಕೊಂಡು ರಾಜೇನ್ದ್ರ ದೇವಂ
ದುಸ್ತಾರಿ ವ್ರಾತ ಘಾತಂ ನೆಗಳೆ ಬರಿಸ ಮೂರಾಗೆ ಮತ್ತಂ ಶಕಾಬ್ದಂ
ವಿಸ್ತಾರಕ್ಕೊಂಭತೇಳೊಂಭತುಮೆನೆ ಬರಿಸಂ ಹೇಮಳಂಬಿ ಪ್ರಸಿದ್ಧಂ
ಸ್ವಸ್ತಂ ಮಾಸಂ ಗಡಂ ಕಾರ್ತಿಕ ಮಸಿತ ದಿನಂ ದ್ವಾದಶೀ ಸೋಮವಾರಂ ||

ಕಂ || ಸ್ವಸ್ತಿ ಶ್ರೀಮತು ಸಕಳಜ
ಗಸ್ತುತರ ವಚೋಗ್ರಗಣ್ಯರೂರ್ಜಿತ ಪುಣ್ಯರ್
ವಿಸ್ತಾರ ಚಾರು ವೀರರ
ಸಸ್ಥಿತ ರಿರಿವೀವ ನುಗುನಾಡಧಿಪರ್ ||

ಕಂ ||
ಎನಿಪ ಕುಲದಲ್ಲಿ ಪುಟ್ಟಿದ
ನನುಪಮನೆರೆಯಂಗನವನ ನಿಜಸುತನೇಚಂ ।
ಮನುನಿಭನವಂಗೆ ಪುಟ್ಟಿದ
ತನೂಭವಂ ಜವನಿಯಮ್ಮನರಿವಿಂ ಗಾರ್ಮ್ಮಂ ||

ಕಂ ||
ಅನ್ತಾ ಜವನಯ್ಯಂಗಂ
ಕಾನ್ತಾಜನತಿಲಕಮೆನಿಪ ಜಾಕಬ್ಬೆಗಮೊ
ಳ್ಪನ್ತಳೆಯೆ ಪುಟ್ಟಿದಂ ರಿಪು
ಸಂತಾನ ನಗೇಂದ್ರ ವಿಲಯ ಪವಿಗಂ ರವಿಗಂ ||

ಕಂ ||
ರವಿಗಂ ಪುಟ್ಟಿದ ಒಡನು
ದ್ಭವ ಮಾಯ್ತರಿವರಿವಿನೊಡನೆ ಪುಟ್ಟಿದುದಾಯಂ ।
ಸವ ಸಂದಾಯದೊಡಂ ಸಂ
ಭವ ಮಾದುದು ಚಾಗವಿಂತುಟುಂ ಬಿರುದುಂಟೆ ||

ವೃ ||
ಕುಡಿಯರ ವಲ್ಲಭಂ ಕುಡಿಯರಾಭರಣಂ ನುಗುನಾಡ ರಾಮನೆ
ನ್ದಡೆ ಕಲಿಕಾಲಕರ್ಣ್ನನ ವಿನೋದದ ಚಾಗದ ಬೀರದಾರ್ಪ್ಪನೀ
ಗಡಿನ ನಿಕೃಷ್ಟ ನಿರ್ಗ್ಗುಣ ನಿಕೃತ್ಯನಿರಾಚರಣೇಟವೀಟರಂ
ಕಡು ಜಡರೆಂತು ಪೋಲಿಪರೊ ಧನ್ಯನೆನಿಪ್ಪ ವಚೋಗ್ರಗಣ್ಯನಾ ||

ಅಕ್ಕರ —
ಚೋಳ ಪಲ್ಲವ ಪಾಂಡ್ಯ ಸಿಳಾಮೇಘ ಕೇರಳ
ಸೊರಟ ಗುರ್ಜರ ಕಾಂಭೋಜ ।
ಲಾಳ ಗಜಪತಿ ಹಯಪತಿ ನರಪತಿ ಯೆನಿಪ
ಮಹಾಪಾಳರಾಸ್ಥಾನದಲ್ ।
ಕೇಳ ತನ್ನನೆ ನಟ ವಂದಿ ಮಾಗಧರ್ ಕೈಕೊಂಡು
ಪೊಗಳಲ್ಕೆ ನೆಗಳೆ ಬಲ್ಲ
ಮೇಳ ಮಾಣಿಕವೆನಿಪ ಜಯಂಗೊಣ್ಡ ಚೋಳ
ಪೆರ್ಮಾಡಿಗಾವುಣ್ಡಂ ತಕ್ಕಂ ||

ಕಂ ||　　ಪಲ್ಲವ ಸತ್ತಿಗೆ ಸಂಕಂ
ಝುಲ್ಲಳಿ ಜಯಮಂಗಳಂಗಳಂ ಚೋಳಮಹೀ ।
ವಲ್ಲಭನಿತ್ತಡೆ ಕುಡಿಯರ
ವಲ್ಲಭನುರೆ ಮಂಡಳೀಕ ಪದಮಂ ಪಡೆದಂ ||

ಕಂ ||　　ಕಡಲ ಕಡೆವರ ಮಜಾಣ್ಡದ
ಕುಡಿವರ ಮಾಸಾಗಜೇನ್ದ್ರದನ್ತುವರಂತ
ಳ್ತೊಡ ನೊಡನೆ ಪರ್ವಿ ಬಳೆದುದು
ಕುಡಿಯರ ವಲ್ಲಭನ ಕೀರ್ತ್ತಿ ಲತೆ ಕೋಮಳದಿ ||

ಕಂ ||　　ಮನುನಿಭ ನೆಡೆ ನಾಡಧಿಪತಿ
ವಿನೇಯ ನಿಧಿ ಸತ್ಯವಾಕ್ಯನಾಳ್ಗೋಜನಮು
ಖ್ಯನ ಕುಲವಧು ಭೂತಬ್ಬೆಗೆ
ಜನಿಯಿಸಿ ಕಲಿಕಾಲ ಸೀತೆ ವೆಸರಂ ಪಡೆದಳ್ ||

ಕಂ ||　　ವನಿತಾರನ್ನಂ ಪೊನ್ನ
ಕ್ಕನ ನಳ್ತಿಯೆ ಮದುವೆಗೊಣ್ಡು ಬೆಳತೂರಧಿಪಂ ।
ಮನು ನಿಭನೆನೆ ನೆಗಳ್ದೀತನ
ವನಿತೆಗೆ ಭೂವನಿತೆಯೊಳಗೆ ಪೆರರೆಣೆಯೊಳರೇ ||

ವೃ ||
ನಿರುಪಮ ಸೀಳದಿಂ ಗುಣದಿ ನುತ್ತಮ ದಾನದಿ ನಾತ್ಮಭಕ್ತಿಯಿಂ ।
ಗಿರಿಸುತೆ ರಂಭೆ ಮೇನಕಿ ಸರಸ್ವತಿ ರುಗ್ಮಿಣಿ ಸತ್ಯಭಾಮೆಯೋಳ್ ।
ದೊರೆಯೆನಲೊಲ್ಲದೀಗಡಿನ ದುಷ್ಟ ಕನಿಷ್ಠ ದುಶೀಲ ದುರ್ಗ್ಗಣಾ ।
ಧರೆಯುರನೆನ್ತು ಪೋಲಿಪರೆ ನಿರ್ಮ್ಮಳ ಚಿತ್ತದ ಪೊನ್ನಕಬ್ಬೆಯಂ ||

ಅ ||
ಚಾರು ಚಾರಿತ್ರೆ ನಯ ವಿನಯಾಕರೆ ಗೋತ್ರಪವಿತ್ರೆ ಸುಸೀಳಯುಕ್ತೆ ।
ನಾರೀಜನರನ್ನ ಮೆನಿಪ ಪೊನ್ನಬ್ಬೆಗಂ ರವಿಗಂಗಂ ಪುಟ್ಟಿದ ದೇಕಬ್ಬೆಯಂ ।
ವೀರಂ ನವಿಲೆ ನಾಡಧಿಪತಿ ಕುರುವನ್ದಗುಲದ ಪೆರ್ವ್ವಯಲಾತನೇ
ಚಂಗೀಯೆ ।
ವಾರಿಜಾನನೆ ವಿನಯು ಚಿನ್ತಾಮಣಿ ಪತಿಹಿತೆಯೊಡಗೂಡಿ ಸುಖದಿನಿಳ್ದು ||

ಕಂ || ಜೆಟ್ಟಿಗನೆನೆ ನೆಗರ್ದಹಿತಘ
ರಟ್ಟಂ ಸುಖ ಮಿರ್ದ್ದು ತನ್ನ ದಾಯಿಗರಂತ ।
ಳ್ತೊಟ್ಟಜೆಯಿ ಸಿರಿದ ಡವನಂ
ನೆಟ್ಟನೆ ತಲಕಾಡಲುಯ್ದು ಕೊನ್ದಂ ನರಪಂ ||

ಕಂ || ಕಲಿಕಾಲವೇಳನೆನಿಸಿದ
ಕಲಿ ಚಾಗಿಯ ನಿರಿದು ಕೊನ್ದರೆಂಬುದು ಮಾತಂ ||
ಲಲಿತಾಂಗಿ ಕೇಳ್ದು ರವಿಗನ
ಕುಲದೀಪಕಿ ಸಾಯಲೆನ್ದು ಕೊಣ್ಡಕೆ ನಡೆದಳ್ ||

ಕಂ || ತನ್ದೆಯು ಮಬ್ಬೆಯು ಮೊಡನೆಯೆ
ಬನ್ಧುಗಳುಂ ಬನ್ದು ಮಗಳೆ ಸಾಯದೆ ಮಾಣ್ ನೀ
ನೆನ್ದೆಲ್ಲಂ ಕಾಲ್ವಿಡಿದಡ
ನಿಂದಿತೆ ದೇಕಬ್ಬೆ ಮುನಿದು ಬಗ್ಗಿಸಿ ನುಡಿದಳ್ ||

ಕಂ || ನುಗು ನಾಡಧಿಪತಿ ರವಿಗನ
ಮಗಳಾಗಿಯು ಮಂತೆ ನವಿಲೆ ನಾಡಧಿಪತಿಗಾಂ ।
ನೆಗಳೆ ಸತಿಯಾಗಿ ಬಾಳ್ವುದು
ಬಗೆ ದರ್ಪ್ಪಣೆ ಕೊಟ್ಟು ಕೊಣ್ಡ ಮನೆಯೆಸ ಮರೆಯಲ್ ||

ಕಂ || ಎನ್ದು ಪರಿಚ್ಛೇದಿಸಿ ನಯ
ದಿನ್ದಂ ದೇವಂಗೆ ತೋಂಟ ಖಣ್ಡದ ಮಣ್ಣಂ ।
ನನ್ದಾ ದೀವಿಗೆ ಗಿತ್ತರ
ವಿನ್ದಾನನೆ ಸಲೆ ನಿವೇದ್ಯಕೆನ್ದನುನಯದಿಂ ||

ಕಂ || ಮಡದಿ ಸಲೆಗೇಳಿಗಳ್ದಿಯ
ಪಡುವಣ ಕಡೆಯಲ್ಲಿ ತೆಂಕಲಯ್ಗೊಳ ಬೆಳೆಯಂ ।
ಕಡು ಗೂರ್ತು ಕೊಟ್ಟು ನುಗುನಾ
ಡೊಡೆಯನ ಕುಲಪುತ್ರಿ ಪೆರ್ಚಿ ಮತ್ತಂ ಮತ್ತಂ ||

ವೃ ||

ನೆರೆದೆಲ್ಲಂ ಬೇಡ ಮಾಣೆನ್ದಡೆ ನುಡಿಯದಿರಿಂ ಪೋಗಿಮಾಂ ಮಾಣೆನೆನ್ದಾ ।
ದರದಿಂದಂ ಭೂಮಿ ಪೊಂಪುಟ್ಟಗೆ ಪಸು ಧನಮುಂ ನೀಡುತಂ...ದೇ ।
ವರದೇವಂಗಳ್ತಿಯಿಂ ಕೈಮುಗಿದುರಿವುರಿಯಂ ಪೊಕ್ಕು ದೇಕಬ್ಬೆತನ್ನಂ ।
ಧರೆಯೆಲ್ಲಂ ಮೆಚ್ಚೆನಿಚ್ಚಂ ಪೊಗಳೆ ನೆಗಳುತುಂ ದೇವಲೋಕಕ್ಕೆ ಪೋದಳ್ ||

ಲಲಿತ ವೃತ್ತಂ ||

ಶ್ರೀ ರಮಣಿ ಗೌರಿ ಶಚಿ ಧಾರಿಣಿಯ ಪುತ್ರಿ ರತಿ
ಭೂರಮಣಿಯನ್ದದ ಸರೂಪವರಿವೊಳ್ದಾ ।
ದಾರೆ ಜಯಧಾರೆ ಜಸಧಾರೆ ನಯಧಾರೆ
ಭಯಹಾರೆ ಪತಿಭಕ್ತೆ ಧೃತಶಕ್ತೆ ಯೆನೆ ಸಂದೀ ।
ವೀರ ನಿಧಿಯಂಚಲದ ವಾರಿನಿಧಿಯಂ ಗುಣದ
ಚಾರುನಿಧಿಯಂ ನೆಗಳ್ದಿ ದೇಕಲೆಯ ನಿನ್ತೀ ।
ನಾರಿ ಜನರನ್ನ ಮನದಾರೊ ಮರೆವರ್ ಸಕಳ
ಧಾರಿಣಿಯೊಳಿಂತು ವರಕಾಂತೆ ದೊರೆಯಾವಳ್ ||

ಅಕ್ಕರ ||

ಪಣ್ಡಿತಾಶ್ರಯಂ ನುಗುನಾಡ ರಾಘವಂ ಮುನಿವರ
ಸಿಂಗ ಮೋಚಕದಾವಳಂ ।
ಚಣ್ಡ ವಿಕ್ರಮಂ ಕುಡಿಯರ ವಲ್ಲಭಂ ಕಲಿಕಾಲ
ಕಣ್ಣರ್ ಮುಚ್ಚರಿಪವರ ।
ಗಣ್ಡಂ ವನ್ದಿ ಚಿನ್ತಾಮಣಿ ಶಿವಪಾದ ಶೇಖರಂ
ನಿಜಸುತೆ ಗನುರಾಗದಿಂ ।
ಮಣ್ಡಲಕ್ಕೆಲ್ಲಂ ಪಡಿ ಚನ್ದಮಾಗೆ ಶಿಲಾಸ್ತಂಭಮಂ
ಶಾಸನ ಮಾಗೆ ನಟ್ಟಂ ||

ಶ್ರೀ ದೇಕಬ್ಬೆ ಮಹಾ ದೇವರ್ಗ್ಗೆ ಬಿಟ್ಟ
ಪೊಂಬೊಲಂ ತೋಣ್ಟ ಖಣ್ಡಮುಮಂ
ನಿರ್ಮಾಣ ಮರೆಳ್ತೆಕೆರೆಯ ತೆಂಕಣ ಕಡೆಯಲ್
ಅಯ್ದು ಕೊಳಗ ಗರ್ದ್ದೆಯುಮಂ ಈ ವಂಸದಲ್
ಪುಟ್ಟಿದವ ರ್ಕಾದಿರಿಸುಗೆ
ಸಲಿಸದವರ್ನ್ನರಕ ಭಾಜನರಪ್ಪರ್

ಕಂ॥ ಮರುಪರ ಚಕ್ರ ದ್ವಿಜರೋಳ್ ।
ಕರೆ ಮರೆಯಿಲ್ಲೆನಿಪ ಕುರೆಬ ನಾದಿತ್ಯಂ ಸ।
ನ್ದರಿಕೆಯುವಗಾದ ಮಲ್ಲಂ।
ಜರುಚದ ಕವಿರಾಜ ಬಾನ್ಧವಂ ಬರೆದನಿದಂ ॥
ಕಣ್ಡರಿಸಿದಂ ಮುನಿವರ ಸಿಂಗಾಚಾರ್ಯಂ
ಮಚ್ಚರಿಪರ ಗಣ್ಡಾಚಾರ್ಯಂ.
(ಹೆಗ್ಗಡ ದೇವನ ಕೋಟೆ ೧೮ ನೆಯ ಶಾಸನ.)

ಮಹಾ ಸತಿ

[ನುಗು ನಾಡಿನ ರಾಜವಾಡೆ ಮಲ್ಲಯುದ್ಧಕ್ಕೆ ಹೊರಟ ಏಚನ ಮನಸ್ಸನ್ನು ತಿರುಗಿಸಲಾರದ ದೇಕಬ್ಬೆಯು ಭಯ ದುಃಖಗಳಿಂದ ಕೊರಗುತ್ತ, ಕರಗುತ್ತ, ಕಾಲ ನೂಕುತ್ತಿದ್ದಾಳೆ. ಗೆಳತಿಯರಾದ ನೀಲಬ್ಬೆ, ಮಲ್ಲಬ್ಬೆಯರಿಲ್ಲದಿದ್ದಲ್ಲಿ ಆಕೆಯ ಗತಿ ಯೆಂತೋ! ಆಕೆಗಂದು ಬೆಳಗಿನಿಂದ ಶಾಂತಿ ಇಲ್ಲ. ನಡುರಾತ್ರಿಯಾದರೂ ಕಣ್ಮುಚ್ಚಲಿಲ್ಲ. ನೀಲಬ್ಬೆಯ ವಾತ್ಸಲ್ಯದ ಫಲವಾಗಿ ಆಗತಾನೇ ಕೊಂಚ ಕಣ್ಮುಚ್ಚಿದ್ದಾಳೆ. ಮಲ್ಲಬ್ಬೆ ನೀಲಬ್ಬೆಯರು ಸದ್ದು ಮಾಡದೆ ಚಂದ್ರಶಾಲೆಯ ಮೊಗಸಾಲೆಗೆ ಬಂದು ನೀಲಾಕಾಶದ ನಕ್ಷತ್ರ ರಾಶಿಯ ಕಡೆ ನೋಡುತ್ತಾ ನಿಲ್ಲುವರು.]

ಮಲ್ಲಬ್ಬೆ — ಏನು ದುರ್ದಿನವಮ್ಮ! ಕೊಲ್ಲುತಿದೆ ಕತ್ತಲೆಯು.
ನೀಲಬ್ಬೆ — ಪ್ರಾಣ ಭಯವೇ ನಿನಗೆ? ಕತ್ತಲೆಯು ಸಾವಲ್ಲ.
ಮ — ಭಯವೆ ಸಾವೋ? ಇಲ್ಲ ಸಾವೆ ಭಯವೋ? ಅಲ್ಲ
ಎರಡು ಒಂದೆಯೊ? ಎಂತೊ ಎಂತುದೋ ನೋವು.
ಭಯವೆಂಬ, ಸಾವೆಂಬ ಮಾತೆ ಬಲು ಸಂಕಟ.
ನೀ — ಭಯವಲ್ಲ; ಸಾವಲ್ಲ; ಬರಿ ಮರುಳು.
ಮ — ಮರುಳಲ್ಲ
ಭಯದಿಂದ, ಸಾವಿಂದ, ಹಿರಿದಾಗಿ ಕಾಡುವಾ
ಬೇಸರದ ಬೇವಿದು. ಕಾಳರಾತ್ರಿಗಳೆನಿತು
ಕಳೆದಿಲ್ಲ, ನೋಡಿಲ್ಲ? ಆದರಿಂತಿರಲಿಲ್ಲ.
ಅಬ್ಬ, ಏನಬ್ಬರ? ಬಲುಕೆಟ್ಟ ನೋಟವನು

ನೆಟ್ಟು ದಿಟ್ಟಿಸುತಿಹಳು ಇರುಳವೆಣ್ಣೇದಿನ.
ಸದ್ದಿಲ್ಲದಿರಲು ಭಯ, ಸದ್ದಾದರೊಂದು ಭಯ.
ಮೈಯೆಲ್ಲ ಕಣ್ಣಾಗಿ ನೋಡಿದರು ಬೆಳಕಿಲ್ಲ.
ಕತ್ತಲೆಂತಾಗುವುದೊ ?

ನೀ — ಬೆಳಕು ಹೆಚ್ಚಾದರೆ.

ಮ — ಅಚ್ಚರಿಯ ಮಾತು.

ನೀ — ಏನಚ್ಚರಿಯ ನೀಕಂಡೆ?
ನೋಡಬಲ್ಲೆಯ ಸೂರ್ಯ ಬಿಂಬವನು ಕಣ್ತೆರೆದು;
ಕಂಗಳಾ ದುರ್ಬಲವೆ ಕತ್ತಲೆಯ ತವರಾಯ್ತು.

ಮ — ಧೀರರೂ ದಿಕ್ಕೆಟ್ಟು ಮಂಕಾಗುತಿಹ ಸಮಯ,
ದುರ್ಬಲಕೆ ನೂರ್ಮಡಿಯ ಅಧಿಕಾರ ಬಂದಿದೆ.
ನಾನಬಲೆ ಗೆಲುವೆನೆಂತದನು ? ಏನೆನಲಿ ?
ಎತ್ತ ನೋಡಲು ಹಾನಿ ಮುತ್ತಿ ಬರುವಂತಿಹುದು.

ನೀ — ಹಾನಿ ಮುತ್ತಿಗೆಯೊಂದೆ ? ಗ್ಲಾನಿಯೂ ಮುತ್ತಿಹುದು.

ಮ — ಆವ ಮುತ್ತಿಗೆಯಾದರಿರಲಿ ತತ್ತರದಲಿ
ಚಿತ್ತ ಚಣಚಣಕೆ ಬೆಚ್ಚುತಲಿ ಪೆಚ್ಚಾಗುತಿದೆ.
ಪಿತ್ತ ಕೆರಳಿತೊ, ಮರುಳ ಮತ್ತೊ, ಕತ್ತಲೆಗೆ?
ಮುಗಿವುದೋ ಇಲ್ಲವೋ ಕಾಣೆನೀ ಇರುಳಿಂದು
ಬಲು ಬೆಳೆಯುತಿದೆ; ಬಣ್ಣವೇರುತೇರುತ ಬಳಸಿ
ಬೆಳಸುತಿದೆ ಬೇಸರವ; ಎಲ್ಲಿತ್ತೊ ಈ ಕಪ್ಪು.
ಜಗದ ಕಪ್ಪೆಲ್ಲವೂ ಹೆಪ್ಪುಗಟ್ಟಿಹುದೇನೊ!
ಜನಕೆ ತಪ್ಪಿಸಲಾಗದಾವೋಡಿಯನ್ನೆಸೆದು;
ಎಂತಪ್ಪನೋಟ ವೇನನ್ಯಾಯ ದಾಟವಿದು.

ನೀ — ಕಪ್ಪು ನೋಡಲೆಬೇಡ. ಕಣ್ಮುಚ್ಚಿ ಮಲಗಿಕೋ.

ಮ — ಮನವೆ ಕಪ್ಪಾಗಿರಲು ಕಣ್ಮುಚ್ಚಲೇನಾಯ್ತು ?
ಬಲುವಿಕಾರದನೋಟ, ಮರೆಸಲಾಗದ ಕಾಟ.
ಉನ್ಮತ್ತ ಭೂತಗಳು.

ನೀ — ಅದು ಬೇರೆ ನೆನಪಾಯ್ತೆ ?

ಮ — ನೆನಪಲ್ಲ. ನಿಜವಾಗಿ ನೆಗೆಯುತಿವೆ ನೋಡಲ್ಲಿ;
ಕಪ್ಪನಪ್ಪಿದನೆಲಕೆ ನೆರಳ ಮಸಿ ಬಳಿಯುತಿವೆ.
ನೀ — ಕಂಡಿತೇ ನಿಜವಾಗಿ ನೆರಳು, ಆ ನೆರಳೆಲ್ಲಿ?
ಮ — ಕತ್ತಲಲಿ ಕಾಣುವುದೆ? ಅಡಗಿತಲ್ಲೇ.
ನೀ — ಅಹುದೆ?
ಭೂತಕೂ ನೆರಳುಂಟು, ಕತ್ತಲಿಗು ನೆರಳುಂಟು (ನಗು)
ಮ — ಸಾಕಿನ್ನು ಪರಿಹಾಸ. ತಮವೆಂದರೇನಮ್ಮ?
ನೀ — ತಮವೆಂದರಜ್ಞಾನ; ಅವಿವೇಕ; ಅಪ್ರೇಮ.
ಮ — ಚದುರೆ! ತತ್ವಗಳೆಲ್ಲ, ತೇಲಿಸುವೆಯಾ ಮಾತು
ದೇ — ಪೊಸತೇನ ಪೇಳಲೇ? ಅತಿಶಯವನೆಲ್ಲ ನೀ
ಬಣ್ಣಿಸಿದೆ ಯಾಗಲೇ.
ಮ — ಮರುಳೆಂದೆ ನೀನದನು,
ನಿಜದ ಕತೆ ಮತ್ತೇನು?
ನೀ — ಬೆದರಿ ಸಾಯುತಲಿರುವೆ.
ಮ — ಇಲ್ಲ, ಬಣ್ಣಿಸು ನೀನು.
ನೀ — ಕಾಣುತಿಹ ಪರಿಯಲ್ಲಿ
ಒಲಿವರಾರಿಲ್ಲವೀ ಘೋರತಮದಾಕೃತಿಯ.
ಈ ನಿಶಿಯ ಸಾಮ್ರಾಜ್ಯ ಪಾತಕದ ಸೌಭಾಗ್ಯ.
ಜಾರಚೋರರಿಗೆಲ್ಲ ಆನಂದದಭ್ಯುದಯ.
ಘಾತಕರ ಪ್ರಾಬಲ್ಯಕನುಕೂಲೆಯಾಗಿರುತ
ಕೋಪತಾಪ ವಿಲಾಪ ರಸಕೇಳಿಯಾಡುವಳು.
ಪ್ರಳಯ ಪರಿಣತೆಯಾಗಿ ತಮಸಿ ಸಂಭ್ರಮಿಸಿ.
ನೀನಾಡಿದಂತೆಯೇ ಮೋಡಿಯಿದು. ಬಲುಕೇಡು
ಮೂಡಿದಂತಹ ನೋಟ. ಮಾಟಗಾತಿಯು ಮಾಯೆ.
ಬಲುಮುರ್ವಿ, ಬಲುಗರ್ವಿ ಇಂದೀಗ ಬಲು ಧೂರ್ತೆ.
ಮ — ಅಹುದಮ್ಮ, ಬಲು ದುರುಳತನವಿದು, ಕುಚೇಷ್ಟೆ.
ನೀ — ಕ್ರೌರ್ಯವೇ ಸರ್ವಸ್ವವೆನುವಂತೆ ತೋರುವಾ
ದುರ್ದೈವದಾಗ್ರಹದ ಪ್ರತ್ಯಕ್ಷ ರೂಪವಿದು.

ಮಾಕಾಳಿ, ಶ್ಯಾಮಲೆ, ನೀಲಾಂಬರವನುಟ್ಟು —
ಮ — ಬಲುಚಂದ, ಬಲುಚಂದ, ಕರಿಕಾಳಿ, ಕ್ಷರಿಯಮ್ಮೈ,
ಕರಿಸೀರೆ, ಏನಂದ? ನಿಜವಾಗಿ ಇಂತಿಹಳೆ?
ನೀ — ರುದ್ರರಸ ಕುಡಿಕುಡಿದು, ಉನ್ಮತ್ತಳಾಗಿರುವ
ಕಿಡಿಗಣ್ಣ ಭಾಮಿನಿಯು, ಮುಡಿಗೆದರಿ ಬಂದಿಹಳು.
ಮ — ಕೆಂಗಣ್ಣು, ಕೆದರುದಲೆ, ಪಾನಮದ, ಉನ್ಮಾದ
ಲಜ್ಜೆ ಯಿಲ್ಲದ ಹೆಣ್ಣು, ಅಂಜಿಸುವಳಲ್ಲವೇ?
ನೀ — ತಂಬುಲದ ಕೆಂಜೇನು ತುಟಿಯಿಂದ ಕಾರುತಿದೆ.
ನಾಲಿಗೆಯ ನೋಡಿದರೆ ಹೃದಯ ರಣರಂಗದಾ
ಕೆನ್ನೀರ ಕಾಲುವೆಯೋ ಎನುವಂತೆ ಚಾಚಿದೆ.
ಮ — ಇನ್ನು ಮಿಕ್ಕಿಹುದೆ? ಗಯ್ಯಾಳಿಯಾ ವಯ್ಯಾರ?
ನೀ — ನೊಸಲಲ್ಲಿ ನೋಡಿದರೆ ಆ ಕುಂಕುಮದ ಪಟ್ಟು
ವೀರಾಂಗನೆಗೆ ದಿಟ್ಟಿ ಪರಿಹಾರ ರಕ್ಷೆಯೋ!
ವೀರದಾವೇಶ ಪಗಿಣಾಮದ ಶಿರೋಬಾಧೆ
ಇಳಿಸೆ ತೇದಿಟ್ಟ ಲೇಪನವೊ ಎನುವಂತಿದೆ.
ಮ — ಕೆರಳಿದ ಕರಾಳಿಯನು ಕೆಣಕಿ ಬಣ್ಣಿಸಿದೆ,
ಪೂರ್ಣವಾಯಿತೊ ಚಿತ್ರ?
ನೀ — ಕೆಣಕಿಲ್ಲ, ಅಣಕಿಲ್ಲ,
ರಣ ಕುತೂಹಲಿಯಾದ ಕಲಿ ಕೆರಳಿದಾಗಿನಾ
ದಾರುಣವ ನೆರಚುತಾ, ಮಾರಣವ ನೆಸಗುತಾ
ಬರುತಿಹಳು ಯಾಮಿನಿಯು.
ಮ — ಏನೇನು, ನಿಜವಾಗಿ
ಅವಳಿನಿಯನೈದಿಹನೆ ಕಾಳಗಕೆ? ಆತನಿಗು
ರಣ ಕುತೂಹಲವೇನು?
ನೀ — ಇಂದಿನಾಸಂದರ್ಭ,
ಇಂತಾಡುತಿಹೆ ನೀನು. ಎಲ್ಲ ಭ್ರಮೆಯ ವಿಲಾಸ.
ಕಣ್ಗೆ ಕಾಣುವುದೆಲ್ಲ ಕತ್ತಲೊಂದೇ ಒಂದು.
ಮನಕೆ ಕಾಣುವುದೆಲ್ಲ ಕಾಳಗವು ಮಾತ್ರವೇ.

ಎಲೆ ಭೀರು ! ಸ್ವಾಧೀನೆಯಾಗು, ಕೇಳಿತ್ತ.
ನಿಶಿಯಾಣ್ಮ, ಶಾಂತನಿಧಿ, ಆ ಸುಧಾಕರನಲ್ಲಿ
ಕೆರಳುವಾ ಕಾವಿಲ್ಲ; ಕದನದಾ ಕೆಚ್ಚಿಲ್ಲ.
ಸೌಂದರ್ಯ ನಿಧಿಯವನು. ಜೀವದಾಹವ ಶಮಿಪ
ಪ್ರೇಮ ಸಾಮ್ರಾಜ್ಯ ಪರಿವೇಷ್ಟಿತನು. ಈ ಜಗಕೆ
ನಗೆಯ ನಿರ್ಮಲಕಾಂತಿ ಬಹುದತ್ತಲಿಂದಲೇ;
ತಂಪೆಲ್ಲ, ಸೊಂಪೆಲ್ಲ, ಇಂಪೆಲ್ಲವಾತನದೆ;
ಸ್ಮರಿಸಿದರೆ ಸಾಕು, ಪರಮಾಹ್ಲಾದ ವಾಯ್ತು.
ಕೋಪ ತಾಪಗಳ ಕರಗಿಸುವನಾ ಪ್ರಿಯದೈವ.
ಮ — ಇಂತು ಕೆರಳಿರುವ ಕಾಂತೆಯನು ಸಂತೈಸೆ
ಬಾರನೇತಕೆ ಇಂದು. ಈ ಉಗ್ರತೆಯನೆಲ್ಲ
ಕರಗಿಸಲು ಬಾರದೇ ಪ್ರಿಯ ಬಂಧುವೈತಂದು,
ಇನಿತು ಭಯ ಬೇಸರಗಳಲಿ ನಮ್ಮ ನೋಯಿಸಲು
ಆ ಪ್ರೇಮ ಸಾರ್ವಭೌಮನಿಗೆಂತು ಮನಸಾಯ್ತು ?
ನೀ — ನಿಯಮಾನುಸಾರದಲಿ ನಡೆಯಲೇಬೇಕಿಂತು.
ಮ — ಎಂತಹದು ಆ ನಿಯಮ ? ಏತಕೋ ಕಾಣೆ.
ನೀ — ನಿಯಮವೊಲ್ಲದೆ ನಿಯಮಿಗಳ ಜರೆವುದಾಚಾರ.
ಮ — ನಿಯಮದಾ ನ್ಯಾಯದಲಿ ಎಂತಪ್ಪ ಅನ್ಯಾಯ ?
ಅಂತವಗೆ ಈ ಸತಿಯೆ ? ಏನು ಸಾಮ್ಯವಿದು ?
ಆ ಸೌಮ್ಯವೀದರ್ಪ, ಆ ಕಾಂತಿ ಈ ಕಪ್ಪು.
ನೀ — ಬಲು ರಮ್ಯ ವೀ ಸಾಮ್ಯ. ಜಗವ ಕಾಯುವ ನಿಯಮ
ಇಂತು ಹಂಚಿಕೆಯಾಗಿ ಧರ್ಮಬಂಧನವಾಗಿ
ಭಿನ್ನ ಸ್ವಭಾವಗಳ ಅನ್ಯೋನ್ಯಭಾವದಾ
ಪರಿಪೂರ್ಣ ಸಿದ್ಧಿಯಲಿ, ಪ್ರೇಮ ವಿಜಯಿಸಿತು.
ಸಹನೆಯಾ ಶೀಲಬಲ ವಿಶದವಾಗಿಹುದಿಲ್ಲಿ.
ಇದಕಿಂತ ಜಗದೊಳಿನ್ನಚ್ಚರಿಯೆ ? ಚಪಲೆ !
ಇಂದಸಿತ ದಿನ ಅದಕೆ ಚಂದ್ರದರ್ಶನವಿಲ್ಲ.
ಏಕಾಧಿಪತ್ಯ ವೀಗವನರಾಣಿಗೆ.

ಮ — ಅದಕೆ
ಈ ತಾಪವೀಕೋಪ, ವಿರಹ ಪ್ರತಾಪವಿದು.
ಈ ಯನುಗ್ರಹಕಾಗಿ ಕಾದಿರುವ ಭಕ್ತರಿಗೆ
ಮಾತ್ರವೇ ಮೀಸಲಾಗಿರಲೀ ಪ್ರಸಾದವು.
ಎಂದೆಂದಿಗೂ ನಮಗೆ ಹಗಲೊಂದೆ ಸಾಕು.
ಈ ಭೀಕರಾಕಾರವಿಂದಿಗೇ ಕಡೆಯಾಗಿ
ಮರೆಯಾಗಲಿನ್ನು. ಈ ದರ್ಶನದ ಮಹಿಮೆಯನು
ಕಣ್ಮನದಿ ನೋಡುವುದು ಬೇಡ.
ನೀ — ತಡೆಯೇನದಕೆ
ಶಶಿನಿಶಿಗಳಿಬ್ಬರನು ನೋಡ ಬಯಸದಿರು.
ಮ — ಶಶಿಯ ನಾನೇನಂದೆ ?
ನೀ — ನಿಶಿಮಾತ್ರ ಬೇಡವೋ ?
ಮೂಢೆ ! ನೀ ನೋಡಲೆಂದೇ ಬರುವರೇನವರು ?
ಅವನ ಸತಿಯನು ಜರೆದು, ಅವನ ಬಯಸುವೆಯಾ ?
ನಿಶಿ ಇಲ್ಲದಾಗ ನಿನಗಾಗಿ ಬರುವನೋ ಚಂದ್ರ ?
ಮ — ನಿನ್ನ ವರ್ಣನೆಯೇನು ? ನೀ ನುಡಿವುದೇನೀಗ ?
ನೀ — ಅಂತರಂಗದ ರೀತಿಗನುಸಾರವಾಗಿಯೇ
ಭಾವಿಸುತ ನುಡಿವ ನೀತಿಯು ನಮ್ಮದಾಗಿದೆ.
ದುಷ್ಟ ಕಲ್ಪನೆಯಿಂದ ನಿಷ್ಠುರವನಾಡುವುದು ;
ದೋಷದಾ ಗುರಿಯಿಟ್ಟು ದೂಷಿಪುದು. ಸತ್ಯವನು
ಅರಿವ ಮಾತೇ ಬೇಡ. ಲೋಕ ರೂಢಿಯಿದು.
ಚಂಚಲದ ಛಿದ್ರಮನ, ಕ್ಷುದ್ರ ಬಲ, ನಮ್ಮದು.
ಅನುವು ತಪ್ಪಿರಲಾಗಿ ಆಕ್ಷೇಪಿಸುವುದೇ
ಸಾಮಾನ್ಯ. ಅನುವಿರಲು ತಪ್ಪೆಲ್ಲ ಒಪ್ಪಾಯ್ತು.
ಅನುಕೂಲಸ್ಥಿತಿಮಾತ್ರ ಸಂಭಾವಿತರು ನಾವು.
ನಿಶಿಗೇನು ದಾಕ್ಷಿಣ್ಯ ? ನಿಯಮಕೇನಪಮಾನ ?
ಮ — ಅಧಿಕಾರ ದಾಹದಲಿ, ಸ್ವಪ್ರತಿಷ್ಠೆಯಲಿ,
ದಾಕ್ಷಿಣ್ಯ ದಯೆಗಳನ್ನುಳಿದ ಗರ್ವಿತೆಯಲ್ಲಿ,

ನಿನಗೇನು ದಾಕ್ಷಿಣ್ಯ? ಕೊಂಡಾಡಲೇನಿಹುದು?
ಉಪಕಾರವೇನೆಂದು ಸಂಭಾವಿಸಲು ಬಹುದು?
ನೀ — ಭೀತಿ ಕಾತರಗಳಲಿ ಕೃತಜ್ಞತೆಯನೆಲ್ಲ
ಬಲಿತೆತ್ತೆಯಾ ಮರುಳೆ? ಮತಿಯುಂಟೆ ಮಾತಿನಲಿ?
ನಿಶಿಗಿಂತ ಉಪಕಾರ ದೈವವಿನ್ನಾವುದು?
ಜಗಕೆಲ್ಲ ಸುಖದೊಂದೆ ಯೋಗನೀಡಿರುವ ಮಹ
ದುಪಕಾರಿ; ನೆಮ್ಮದಿಯ ಬಂಧು; ಶ್ರಮಪರಿಹಾರಿ;
ಸರ್ವ ಸಮದರ್ಶಿನಿ; ಅಭಿಮಾನ ದೇವತೆ.
ಈ ಮಾತೆಯಂಕ, ಜಗದೇಕ ಪರ್ಯಂಕ.
ದಿವ್ಯ ಪ್ರಕಾಶವನು ಗರ್ಭದಲಿ ಬಚ್ಚಿಟ್ಟು
ಜಗದ ಜಾಗೃತಿಯೆಲ್ಲಬಾಚಿ ಕಟ್ಟುತಲಿಹಳು
ಮೋಹಪಾಶವ ಬಿಗಿದು; ತನ್ನ ಸೀರೆಯ ನಿರಿಯ
ಹಾಸುವಳು ಮಕ್ಕಳಿಗೆ. ಕಣ್ಣೆವೆಯನಿಕ್ಕದಲೆ
ಕಾದುಕೊಂಡಿಹಳೆಲ್ಲ ಜೀವಗಳ, ಶಕ್ತಿಗಳ.
ಈ ರಕ್ಷಕಿಯ ದಯದಿ ಸುರಕ್ಷಿತರು ನಾವು.
ಮ — ಚಿತ್ರವೇ ಬದಲಾಯ್ತು; ಬಲು ವಿಚಿತ್ರದ ಮಾತು;
ನಿಜವಾವುದೋ ಪೇಳು.
ನೀ — ಗುಣದೋಷ ಸಂಕಲಿತ,
ವಿಸ್ಮಯಾವಹ, ಮಹಾರಾತ್ರಿ ಲೀಲೆಯ ಕುರಿತು
ಬಗೆಬಗೆಯ ರೀತಿಯಲಿ ಬಣ್ಣಿಸಿಹರೆನಿಬರೋ.
ದೋಷಪೂರಿತವೆನಿಪ ಆಚರಣೆಯೆಲ್ಲವೂ
ತಂತ್ರಮಯ. ಕಾರ್ಪಣ್ಯ, ವಂಚನಾಶ್ರಯವಾಗಿ
ಅಜ್ಞಾನ, ಅವಿವೇಕಗಳ ಮೆರೆಸುತಿದೆ. ಅದುವೆ
ಭೀತಿಯೂ ಆಪತ್ತು, ಸ್ವಾರ್ಥದಾ ಸಂಪತ್ತು.
ರಜನಿ ಜಡ ಚಿತ್ತರಂಜಿನಿಯಾಗಿ ರಮಿಸಿ,
ಅಪವಿತ್ರ ಪಾತ್ರದಲಿ ಪ್ರಬಲೆಯೆಂದೆನಿಸಿದಳು.
ಈ ಭಾವವಂತಿರಲಿ; ಕಂಡು ಕಾಣದ ತೆರದಿ
ನಿಶಿಯ ನಿಜ ಮಹಿಮೆಯಸದೃಶ, ವರ್ಣನಾತೀತ.

ಆಕೆಯ ಮನೋಧರ್ಮ ಸುಪವಿತ್ರ, ರಮಣೀಯ.
ಚತುರೆ, ಸುಂದರಿ, ಸರಸಿ, ಸೌಮ್ಯ ಪ್ರಚೋದಿನಿ.
ಶೂನ್ಯ ಪ್ರಮೋದ ಸಂಭಾವಿತೆ. ಮಹಾ ಸತ್ವ
ನಿಸ್ಸತ್ವ ನೀರವದ, ಮೌನಲಯ ವಿಸ್ಮೃತಿಯ,
ಗಾಢ ನಿಶ್ಚಿಂತೆ ಯನುಭವದಿ ಸುಪ್ರೀತೆ.
ಭೀತೆ ನಿರ್ಭೀತೆ; ಚಂಚಲೆಯಚಂಚಲೆ;
ಕ್ರೂರಿಯಕ್ರೂರಿ; ನಿರ್ದಯೆ ದಯಾಮಯಿ. ಇಂತು
ಉಭಯ ರೀತಿಯಲಿ ವರ್ತಿಪಳು.

ಮ — ಭ್ರಮೆಯೆಲ್ಲವನು
ವಿಭ್ರಮದಿ ಬೆರಸಿದೆ; ಮಹಾ ಚತುರೆ ನೀನು.
ನೀಲೇ ! ನಿಜವಾಗಿಯೂ ಇರುಳೆನಗೆ ಅಭಿಮಾನಿ.
ಅಂಜಿಪುದು, ಸೋಲಿಪುದು, ಮಾತ್ರವೇ ಸೇರದು.

ನೀ — ಅದು ಸಹಜವಾಯ್ತೆಮಗೆ. ಆಕೆಗೂ ಅಂತೆಯೇ
ಸೋಲಿಪುದು ಸುಲಭವೇ. ಸೋಲುವುದು ಸಹಜವೇ.
ಅಂಜಿಪುದು ಅಭ್ಯಾಸ. ಅಂಜುವುದು ಬಲು ಬೇಗ.

ಮ — ಏನು ಸೋಜಿಗದ ಕತೆ. ಸೋಲಿಸುವರಾರೋ,
ಅಂಜುವುದು ಯಾರಿಗೋ ? ಅಂಥವರು ಯಾರಮ್ಮ?

ನೀ — ಪ್ರಳಯ ಭಂಗಿಯಲೀಗ ಪ್ರಣಯ ಕೋಪವ ನಟಿಸಿ
ಪರಮ ಸಾಹಸಿಯಾಗಿ ತೋರುವೀ ಯಾಮಿನಿಯು
ನಲ್ಲನಾ ನಗೆಮೊಗವ ನೋಡುತಾ ನೋಡುತಾ
ದಿನದಿನಕೆ ಸೋಲುವಳು, ನಗೆಯ ಸೂಸುವಳು.
ಆ ಮಂದಹಾಸವನು ಆ ವಿಲಾಸವನು
ಮುಚ್ಚು ಮರೆ ಇಲ್ಲದಾ ಸ್ವಚ್ಛಂದ ಲೀಲೆಯನು
ನೋಡಬಯಸದರಾರು ? ಅದಕಾಗಿ ಕಾದಿಹರು
ಸಹೃದಯರು. ನಿಶಿಯು ನಕ್ಕಾಸಮಯ ಜಗವೆಲ್ಲ
ಹಾಲಿನಾ ಕಡಲುಕ್ಕಿ ಹರಿವಂತೆ ಕಾಣದೇ ?
ಯುಗ ಯುಗವು ಕಳೆದಿನ್ನು ನವದಂಪತಿಗಳಿವರು.
ಆ ನಗೆಯ ಸಂಗಮದ ಸುಪ್ರಸನ್ನತೆಯ

ನೈವೇದ್ಯದಾ ರುಚಿಯು ದಿನದಿನಕು ಪೊಸತು.
ಇದಕಿಂತ ಸೊಬಗೆಲ್ಲಿ, ಜಗದಾದಿ ಕಲೆಯಿದು.
ಮ — ಸೊಗಸಾಯ್ತು ಈ ಸೋಲು. ಅಂಜಿಕೆಯ ವಿವರಿಸು.
ನೀ — ದುರ್ಬಲರ ಮನಮುತ್ತಿ ಕಾಡುತಿಹಳೀಗ.
ಸಮಯ ಸರಿದಂತೆಲ್ಲ ರವಿಯಾಗಮನ ಭಯದಿ
ದೂರದೂರಕೆ ಸರಿದು ಮಾಯವಾಗುವಳು.
ಪರಪುರುಷನಿಗೆ ನಾಚಿ, ನೆರಳು ಸೋಕಿಸದಿರುವ
ವರ ಪತಿವ್ರತೆಯು ಸೋಗಿನಲೀ ಮಹಾಮಾಯೆ,
ಅರುಣ ಛಾಯೆಯ ಕಾಣ ಲಂಜುವಳು.
ಮ — ಬಲು ರಮ್ಯ,
ರಮ್ಯದಲಿ ರಮಣೀಯ.
ನೀ — ಮಹಿಮೆಯಂತಹುದು.
ಸುಜ್ಞಾನ ಪ್ರಜ್ಞಾವಿವೇಕಗಳ ಸತ್ವವನು
ಕರುಣಿಪಳು ಈ ಜನನಿ ಪರಮ ಯೋಗಿನಿಯಾಗಿ.
ಆಕೆಯಾ ಕೌಶಲಕೆ ಜಗವೆಲ್ಲ ಸ್ವಾಧೀನ.
ನಿರ್ಭಯಾನಂದದಲಿ ನೆಲೆಗೊಂಡ ಯೋಗಿಗಳ
ಶಾಂತಿ ಸರ್ವಸ್ವವಾಗಿಹಳೀ ಜಗನ್ಮಾತೆ.
ತಮದ ಮರ್ಮವಿದೆಲ್ಲ ಬಯಲಾಯಿತಲ್ಲವೆ?
ಭಯವೆಲ್ಲ ಬಿಟ್ಟಿತೋ? ಭೂತಗಳ ನಟ್ಟಿದೆಯೋ
ಏನಲ್ಲಿ ದಿಟ್ಟಿಪುದು?
ಮ — ಕಾಣದೇ ನಿನಗೆ?
ಭಯವನೆಚ್ಚರಿಸುತಿದೆ ನೋಡಲ್ಲಿ.
ನೀ — ಏನದು? (ದಿಟ್ಟಿಸಿ ನೋಡಿ)
ನೆಡುಗಂಬಗಳ ನೆರಳು, ಮೇಲಿಟ್ಟ ದೀವಿಗೆಯು
ಗಾಳಿಯಾಟಕೆ ಸಿಲುಕಿ ಅಲುಗುತಿದೆ ಅಹಹಾ!
ನೀ ಕಂಡ ಭೂತಗಳು (ನಗುವಳು)
ಮ — ನಿನ್ನ ನಗೆಯನು ಕೇಳಿ
ಸಖಿ ಬೆಚ್ಚಿದಳು ನೋಡು

ನೀ — ತಪ್ಪಾಯ್ತು ನಾ ಮರೆತೆ.
(ದೇಕಬ್ಬೆಯು ಅರೆ ನಿದ್ದೆಯಲ್ಲಿ ಕನವರಿಸುವಳು)
ದೇ — ಅಡಿಗೆರಗಿ ಬೇಡುವೆನು. ನುಡಿಯ ನಾಲಿಸು ನಲ್ಲ!
ತಡೆಯೊಂದು ದಿನ ಮಾತ್ರ.
ಮ — ಕಂಗೆಟ್ಟ ಹಂಬಲವೆ?
ನೀ — ಎರಡಿರುಳು ಜಾಗರದಿ ಬಳಲಿತ್ತು ತನುವಿದು.
ವೇದನೆಯ ದುಸ್ಸಹ ದುರಾಕ್ರಮಣದಿಂದೆ ಮನ
ಹಣ್ಣಾಗಿ ಹಲುಬಿನಲಿ ವಿಶ್ರಾಂತಿಯೊಂದಿನಿತು
ಬಯಸಿತ್ತು. ಬಲುವೈರ ಸಾಧನೆಯು ಕಾಲಕೆ.
ಮ — ಕಾಲ ಪುರುಷನ ಕಾಟದಿಂದ ಪಾರಾಗುವೆವೆ?
ಏನುಪಾಯವು ನಮಗೆ? ಏನು ಸಾಧನವೀಗ?
ನೀ — ಸಾಧ್ಯವೇನೇ ಇರಲಿ, ಸಾಧನವು ಬೇಕಿಹುದು.
ಬರಿದು ಹಿಂಸೆಗೆ ಸಿಲುಕದಿರಲು ಯತ್ನಿಸಬೇಕು.
ಮ — ನಮಗೆ ಇಂತಿರುವಲ್ಲಿ ಸಖಿಯ ಪಾಡೇನಮ್ಮ?
ನೀ — ಜಗದಿ ಸಾಮಾನ್ಯವಿದು, ಹಿಂಸೆಯನುಭವಬೇಕು.
ಮ — ಏನ ಬಯಸುವೆ ನೀನು? ಬಲು ವಕ್ರ ನಿನ್ನ ಬಗೆ,
ಹಿಂಸೆಗಾಹ್ವಾನವೀಯಲಿ ಬೇಕೊ?
ನೀ — ಅಲ್ಲವೇ
ಸ್ವಾಗತಕೆ ಕಾದಿಹುದೆ ಕಷ್ಟ ಬರುವುದಕೆ?
ಎಲ್ಲಿಯೂ ಆಹ್ವಾನಿಸುವರಿಲ್ಲದುದಕಾಗಿ
ಎಲ್ಲೆಲ್ಲಿ ನೋಡಿದರು ತಾನೆ ತಾನಾಗಿಯೇ
ಬಂದು ಹೋಗುತಲಿಹುದು; ಪಸಿವ ನೀಗಲಿಕಾಗಿ
ಆದರಣೆಯಾಶಿಸದ ಅಭ್ಯಾಗತರ ತೆರದಿ,
ಮ — ಹಿಂಸೆಗೂ ಹಸಿವಂತೆ; ಹಸಿವಿಗೂ ಹಸಿವಂತೆ.
ನೀ — ನಿಶ್ಚಯವನೇ ನುಡಿದೆ. ಸುಖ ದುಃಖದಾಟಗಳು
ನಡೆಯುತಿಹುವಂತೆಯೇ. ಸುಖದ ಗೆಲವೇ ಬಯಕೆ
ದುಃಖವೂ ಗೆಲ್ಲುತಿದೆ. ಜಗದ ಕಟ್ಟಳೆಯಲ್ಲಿ,
ಮಾನವರ ಜೀವನವು ಎಡವುತಾ ಬೀಳುತಾ,

ಏಳುತಾ ಸಾಗುತಿದೆ! ಆವ ಜೀವನ ಪಥದಿ
ಈ ವಿಧಕೆ ತಡೆಯಿಲ್ಲ. ಅನುಭವಕೆ ವೇದ್ಯವಿದು.
ನಮ್ಮ ಸ್ಥಿತಿ ಮಿತಿಯಲ್ಲಿ ನಾವಿರಲು ಬಾಳು ಹಿತ.
ಆಗುಹೋಗುಗಳಲ್ಲಿ ಅಧಿಕಾರವೆಮಗುಂಟೆ?
ನಮ್ಮಾಸೆ, ನಮ್ಮಬಲ, ನಮ್ಮಧೀನದೊಳಿಲ್ಲ.
ಸುಖ ದುಃಖದಾಶ್ರಯದ ನಮ್ಮಿರವಿನಾಪರಿಯ,
ಪರಿಮಿತಿಯ ನಾವಿನ್ನು ತಿಳಿದಿಲ್ಲವದಕೇ
ಕ್ಲೇಶ ಪರ್ವತವಾಯ್ತು. ಸುಖದ ಕಲ್ಪನೆಯೋ?
ಈ ಲೋಕವೇ ಸಾಲದೆಮಗೆ. ಸ್ವರ್ಗವು ಬೇಕು.
ಮ — ಸುಖದ ಬಾಳಿಗೆ ಸ್ವರ್ಗವಾದರ್ಶವಾಗಿರಲು
ತಪ್ಪೇನು?
ನೀ — ತಪ್ಪಿಲ್ಲ, ಆದರದು ಬರಿಯಾಸೆ.
ಮಾನವತ್ವವ ನಿಲಿಸಿ ಕೊಂಬುದಕೆ ಮುನ್ನವೇ
ದೇವತ್ವವನು ಪಡೆವ ಆತುರವದೇತಕೆ?
ಅಂಕೆ ಇಲ್ಲದ ಮನಸು, ಶಂಕೆ ಸಂಕೋಚಗಳ
ಸ್ವಾಧೀನವಾಗಿಹುದು. ಸ್ವೈರಣೆಯ ಸುಪರಿಚಯ
ಶಕ್ತಿ ಪರಿಚಯವಿನ್ನು ನಮಗಾಗಲಿಲ್ಲ. ಅದು
ಬಯಸುವರು ನಾವಲ್ಲ. ಆ ಕಾಲವೆಂದಿಗೋ.
ಮಾನವರ ಉದ್ಧಾರ ಮನ ಪರೀಕ್ಷೆಯೊಳಾಯ್ತು.
ದಾನವರ ಉದ್ಧಾರ ದಂಡನೆಯೊಳಾಯ್ತು.
ಮ — ಆವ ಉದ್ಧಾರವೆಂತಾದರೂ ಆಗಲಿ.
ಧರ್ಮ ಸಂಕಟದಿಂದ ಉದ್ಧರಿಸಿದರೆ ಸಾಕು
ಇಂದು ನಮ್ಮೆಲ್ಲರನು. ಆದೈವವಾವುದೋ
ಅದಕೆ ನಾ ಶರಣು (ಕಿವಿ ಗೊಟ್ಟಾಲಿಸಿ) ಕೇಳಲ್ಲಿ ಕೇಳುವುದೇ?
ನೀ — ಏನಾಯ್ತು? ಗಾಳಿ ಸುಯ್ಯಿಡುತಲಿದೆ.
ಮ — ಶಿವ ಶಿವಾ
ಗೂಬೆಗಳು ಸಾರುತಿವೆ ವೇದಾಂತ ಸಾರವನು.

ನೀ — (ಕಿವಿಗೊಟ್ಟು) ಎಲೆ ಮರುಳೆ! ಜಯ ಕಹಳೆ!
ಭೀತಿಯಲಿ ಕಂಗೆಟ್ಟ
ಶ್ರುತಿ ಮಹಿಮೆ ನಿನ್ನದು. ಇಂತಾಯ್ತು. ಪೋ ಪೋಗು.
ಚಾರ ಬಂದಿರಬಹುದು. ನೋಡು ಮೊಗಸಾಲೆಯಲಿ.
(ಮಲ್ಲಬ್ಬೆಯು ಹೋಗುವಳು, ದೇಕಬ್ಬೆಯು ಮತ್ತೆ ಕನವರಿಸುವಳು)
ದೇ — ನಾಳೆ ಪಿರಿಯರೊಳೊಂದು ಯೋಚನೆಯ ಕೈಗೊಂಡು
ಕಜ್ಜವೆಸಗುವದೊಳಿತು. ಮಲ್ಲ ಯುದ್ಧವ ಮಾಣು.
ನೀ — ನಿದ್ದೆಯುಪಕಾರವನು ಸಹಿಸದೇ ನಿನ್ನ ವಿಧಿ.
ಮ — (ಬಂದು) ಅರಸಂಗೆ ಜಯವಂತೆ, ಅರಸಿಗರುಹುವೆಯಾ?
ನೀ — ತಾಳು, ತಿಳಿಸಿದರಾಯ್ತು. ತಿಳಿವುದೆಂತಾದರೂ
(ಉಸುರ್ಗರೆದು) ಜಯವಾರ್ತೆ. ಸಂತಾಪದುನ್ಮತ್ತಲೀಲೆಗಿದು
ಪ್ರಸ್ತಾರ. ಉತ್ಪಾತ ಸೂಚನೆಗೆ ಈ ವಿಜಯ.
ದುಡುಕಿದನು ನಮ್ಮೊಡೆಯ ಅಲ್ಪ ಕಾರಣಕಾಗಿ
ನಂಬಿದರ ಕೈಬಿಟ್ಟನಿಂದು ನಮ್ಮರಸ.
ಮ — ಅರಸನಲಿ ಅನ್ಯಾಯವೇನು? ಈ ಕಾಳಗಕೆ
ಚೋಳ ಭೂಪಾಲನೇ ಮೂಲ ಕಾರಣನಲ್ತೆ!
ಮಲ್ಲಯುದ್ಧವನಿಲಿಪ ನಿರ್ಬಂಧ ಶಾಸನವ
ಮಾಡಿದನದೇಕೆ? ಈ ವಿಪರೀತಕಾಗಿ
ಜೆಟ್ಟಿಗರು ಕೆರಳರೇ ಸಹಿಪರೆಂತಿದನು?
ಚಲದಿ ಶಾಸನ ಭಂಗ ಮಾಡಲನುವಾದರಿಗೆ
ಸಮಯವನುಕೂಲವಾಯಿತು. ಏನು ಕಾರಣವೊ
ಒಡನಾಡಿಯಾಗಿ ವಿಶ್ವಾಸವೆಲ್ಲವ ಮರೆತು
ಎರೆಯಂಗ, ದಾಯಾದ ಮತ್ಸರವ ಸಾಧಿಸಿದ.
ಕಲಹ ಕಾರಣಕಾಗಿ ಕಾದಿರುವ ಕಲಿಗಳಿಗೆ
ಪ್ರಬಲ ಕಾರಣವೇಕೆ? ತೋಳತಿನಿಸೆಂತಾರೆ
ತೀರಿಸಲು ನುಡಿಯೊಂದು ಸಾಲದೇ ಸಾಧನೆಗೆ?
ನೀ — ಕಲಿಗಳ ಸ್ವಭಾವವೇ ನೆಲೆವನೆಯು ಕಲಹಕೆ
ದುಡುಕಿಗಾಸರೆಯದೇ, ಹಿಂದು ಮುಂದರಿಯುವಾ

ಆಚಾರವೆಲ್ಲಿ ನುಗ್ಗುವರೊಂದೆ ಬಾರಿಗೆ. (ಹಾರಿಗೆ)
ಮ — ಕಲಿಯು ಕೆರಳಿಸಬಹುದೆ? ಕಲಿಕಾಳವೇಳನನು
ಕೆಣಕಿ ಬದುಕಿದರುಂಟೆ? ಅಹಿತರ ಘರಟ್ಟನಲಿ
ಕೇಡಿಗರಿಗುಳಿವುಂಟೆ? ಎರೆಯಂಗನೆಸಗುತಿಹ
ಕೆಡುಕುಗಳನೆಲ್ಲ ಮನ್ನಿಸತರವೆ? ಬಡಪಾಯಿ
ನಮ್ಮ ಪ್ರಜೆ ಕೊಲೆಯಾದ. ನಾಡಿಗಪಕಾರವಿದು.
ಅನ್ಯಾಯ ದಂಡಿಸದೆ ಬಿಡಲೆಂತು? ನಮ್ಮರಸ
ನಾಡ ನಷ್ಟವ ತನ್ನದೆಂದು ಕಾಣುವನಲ್ತೆ?
ನೀ — ವಿಹಿತ ರೀತಿಯೊಳಿವರು ವೈರವನೆ ಜಯಿಸಿರಲು
ವೀರಧರ್ಮಕೆ ಊನವೇನಿತ್ತು? ಎರೆಯಂಗ
ಅಪಕಾರಿ ನಿಜ. ಅವನ ದಂಡಿಪುದು ಕರ್ತವ್ಯ.
ಕರ್ತವ್ಯ ಪಾಲನೆಗೆ ಕೊಳುಗುಳವೆ ಬೇಕೇನು?
ಮಡಿದವನ ಜೀವ ಪಿಂತಿರುಗಿತೇ ಸಿದ್ಧಿಯಲಿ.
ಶಾಸನವ ಮೀರಿದರು. ಚಲವುಗೆಲ್ದುದು. ನಾಡ
ಹಿತವೆಸಗಿದಂತಾಯ್ತೆ? ಆರಿಗುಪಕಾರವಿದು?
ದಾಯಾದ ವೈರವನು ಪೌರುಷದಿ ಗೆಲಬೇಕೇ?
ನಾಶಪರಿಣಾಮದಲಿ ಸನ್ನಿಹಿತವಾಗಿಹುದು
ಈ ವಿಜಯ. ಪೌರುಷದ ವಿತರಣೆ ಇದಲ್ಲ.
ಕಡುಗಲಿಗಳಿವರು; ರಣ ಚಾಪಲ್ಯ; ಬೇಕಿತ್ತು
ನೆಪವೊಂದು: ಪೊಂಚಿದ್ದು ಸೊಕ್ಕನಿಳಿಸಿದರಿಂತು.
ಅವಿವೇಕವಾಯ್ತಲ್ಲ. ಬಲವಂತದಾಹ್ವಾನ
ವಾಯ್ತು ಆಪದಕೆ.
ಮ — ಏನಿಂತು ನುಡಿಯುತಲಿರುವೆ?
ವೀರ ಧರ್ಮವ ಮೀರಿ ನಡೆದನೇ ನಮ್ಮರಸ?
ಆವ ಲೋಪವ ಕಂಡೆ ನೀನವರ ಕಜ್ಜದಲಿ?
ನೀ — ನಿರ್ವಾಹ ವಿಲ್ಲದಿರೆ ವೀರರಿಗೆ ರಣಕೇಳಿ
ಸಂದರ್ಭವಾಗಿಹುದು ಅತ್ಯಪೂರ್ವದಲಿ.
ಆ ಧರ್ಮದುದ್ದೇಶ ಬಹು ಭವ್ಯ, ಗಂಭೀರ.

ದಾರುಣವೆ ಗುರಿಯಲ್ಲ. ಕ್ಷಮೆಯೇ ಪ್ರಧಾನ.
ಆ ನಿಯಮಪಾಲನೆಯು ಸ್ನೇಹಭಂಗವೆ? ಸಮರ
ದಾಹ ಶಮನವೆ? ಅಲ್ಲ. ಪರಿಶುದ್ಧ ಶೀಲವದು.
ವೀರಧರ್ಮವು ತ್ಯಾಗ. ಅದರ ಕರ್ಮವು ಸೇವೆ.
ವೀರರೌದಾರ್ಯದಲೆ ಜಗದ ಕ್ಷೇಮವಿದೆ.
ಪೌರುಷದ ವಿನಿಯೋಗವತಿ ಸೂಕ್ಷ್ಮವಾಗಿಹುದು.
ಆತ್ಮಗೌರವ ಉಂಟು. ಅದು ಗರ್ವವಲ್ಲ.
ಸಾಹಸದ ಸಾರ್ಥಕವು ಮರುಳು ಕೋಪದೊಳಿಲ್ಲ.
ಅಲ್ಪ ಹಟ ಸಾಧನೆಗೆ ಕೆರಳಿ ಧುಮ್ಮಿಕ್ಕಿದರೆ
ಕದನ ಧರ್ಮದ ಗರ್ಭವಡರಿದಂತಾಯ್ತೇ?

ಮ — ಎಲ್ಲ ದುರ್ದೈವದಾ ಉದ್ದೇಶ. ನೀಲೇ!
ಶಾಸನವ ಮೀರಿದರೆ ಆವ ದಂಡನೆಯೋ?

ನೀ — ಮರಣವೇ ದಂಡನೆಯು, ವಿವರಣೆಯು ಬೇಕೇ?

ದೇ — (ಬೆಚ್ಚುತಾ) ಆರು ಕರೆದವರೆನ್ನ ನೀಲೆ?

ನೀ — ಆರಿಲ್ಲವೇ!
ಕನಸಾಗಿರಲಿಬೇಕು.

ದೇ — ನಲ್ಲನಾ ದನಿಯು.
ಅರಸಂಗೆ ಜಯವೆಂದರಾರು? ಬಂದನೆ ಚಾರ?

ನೀ — ನೆನೆ ಸರ್ವಮಂಗಳೆಯ, ಅರಸಂಗೆ ಜಯವಾಯ್ತು.

ದೇ — ಚಾರನನು ಬರಮಾಡು

ನೀ — ದಣಿದಿರುವೆ ಗೆಳತೀ!
ಕರೆಸುವ ನಿಧಾನದಲಿ.

ದೇ — ಎನ್ನ ದಣಿವಾರುವುದೆ?
ಮನವು ಕುರುಡಾಗಿಹುದು. ಕಳವಳದ ಕಾವಳದ
ಕಾಡಿನಲಿ ಅಲೆಯುತಿದೆ. ಕೊರಗಿಬೇಸರವಾಯ್ತು.
ಇನಿಯನ ವಿಚಾರವನು ತಿಳಿವ ಕಾತರ ಬೇರೆ
ಮಲ್ಲೆ ನೀ ಪೋಗಿ ಕರೆ.

ಮ — ಕರೆತರುವೆ ನೀಗಲೇ (ಹೋಗುವಳು)

(ಚಾರ ಬಂದು ತಲೆ ಬಾಗುವನು)

ದೇ — ಕಾಳಗದ ಸಂಗತಿಯದೇನು ?
ಚಾ — ಜಯ ವೊಡೆಯನಿಗೆ.
ದೇ — ಅರಸನಿಗೆ ಕುಶಲವೇ ?
ಚಾ — ಸುಖವಿಹರು.
ದೇ — ಮತ್ತೇನು ?
ಕಾಳಗವು ಎಂತಿತ್ತು ?
ಚಾ — ಇಂತಪ್ಪ ಕಲಿತನವ
ಎಂದು ನೋಡಿದೆನಿಲ್ಲ, ಜಗಜಟ್ಟಿ ನವ್ಮೊಡೆಯ.
ದೇ — ಎರೆಯ ಮನ್ನಿಸ ಬೇಡನೇ ? ಅರಸ ಮನ್ನಿಸನೆ ?
ಚಾ — ಮನ್ನಣೆಯ ಮಾತೆಲ್ಲಿ ?
ದೇ — ಆರು ಮುಂಬರಿದವರು ?
ಚಾ — ನೀಮುಂದು ತಾಮುಂದೆನುತ್ತೆ ಕೆಲ ಸಮಯವನು
ನೂಕಿದರು, ತೀರದೀ ಕಜ್ಜವೆಂದೆನುತ ನಡು
ಗಟ್ಟಿದರು, ಭುಜತಟ್ಟಿ, ದಿಟ್ಟತನದಿಂದಡಿಯ
ಮೆಟ್ಟಿದರು, ಹೂಂಕರಿಸಿ ಧುಮ್ಮಿಕ್ಕಿ ಪಾಯ್ದರು.
ರಭಸದಲಿ ಪೊಯ್ದರು, ಪಲ್ಕಡಿದು ಮುಷ್ಟಿಯಲಿ
ಜಜ್ಜಿದರು. ನೆಲ ನಡುಗುವಂತೆ ಬಡಿದಾಡಿದರು.
ಸೊಕ್ಕಿದಾ ಕಾಡಾನೆಗಳ ತೆರದಲುಬ್ಬೆಗದಿ
ಮೆರೆದೆಲ್ಲ ಮರೆತರು. ಸಮಕಾಯ, ಸಮಶೌರ್ಯ,
ವಿಾರಿಸಿದ ರೊರ್ವರೊರ್ವರನು. ಪೊತ್ತೇರುತಾ
ಬಂದಂತೆ ಬೆಳೆಯುತಾ ಬಂತವರ ಸಾಹಸವು.
ಆವೇಶವೇರುತ್ತ ಮನಕೇನು ಬರಲಿಲ್ಲ,
ಅಭಿಮಾನವೇನಾಯ್ತೊ ? ಬಳಗವೆಲ್ಲಿತ್ತೋ ?
ಕೆಳೆಯೆತ್ತ ? ಬಲದ ಮತ್ತೇ ಮತ್ತು.
ದೇ — ಕಡೆಗೇನು ?
ಚಾ — ಜಟ್ಟಿಗನ ಎದೆಯ ನೌಂಕಿದನರಸ
ದೇ — ಏನಾಯ್ತು ?

ಚಾ— ಬಸವಳಿದು ಭುವಿಗೆರಗಿದನು ಎರೆಯ
ದೇ— ಶಿವಶಿವಾ.
ಚಾ— ಬಳಿಕಲರಿವಾಯ್ತು, ಬಳಿಗೈದಿ ನುಡಿಸಿದನು,
ತನ್ನ ಮಡಿಲೊಳಗಿರಿಸಿ, ಉಪಚರಿಸಿ, ನೀರುಣಿಸಿ,
ಕಂಬನಿಯ ಸುರಿಸಿ, ಮನ್ನಿಸ ಬೇಡಿದನು ದೊರೆಯು.
ಮ— ಶೀಲ ಬಲ್ಲಿದನರಸ, ಅಂತೆಸಗದಿರುವನೇ?
ಕೆಟ್ಟಸಮಯದಲಿ ಕೈಮೀರಿ ಬಂದಾ ಪಾಪ
ಕರಗಿತಾಗಲೆ.
ದೇ— ಎನ್ನ ಕಂಬನಿಯ ಕಂಡಾಗ
ರೋಷವೇ ಕರಗಿರಲು ಇನಿತನರ್ಥಕೆ ದಾರಿ
ಎಲ್ಲಿತ್ತು? ಈಗಳೋ, ಘೋರವಾದಪ್ರಮಾದ.
ನೀ— ಅಳುಕಲಾಗದು ಸಖೀ! ಶುಭವ ಸಾಧಿಸಲೆಂದು
ಹರಕೆಯನು ಸಲಿಸು, ಜಗದಂಬೆ ರಕ್ಷಿಸಲಿ.
ದೇ— ಸಮ್ಮತವು ನೀಲೇ! ರಕ್ಷೆಯನು ಬೇಡುವುದೆ
ಉಚಿತ ಕರ್ತವ್ಯವೆನಗೀಗ, ಮಲ್ಲಬ್ಬೇ!
ಜಯಮಾಲೆಯನ್ನು ತಾ ಕಳುಹ ಬೇಕರಸಂಗೆ
(ಮಲ್ಲೆಯು ಜಯಮಾಲೆಯನ್ನು ತರುವಳು)
ದೇ— (ಚಾರನೊಂದಿಗೆ) ಅರಸರ ಸುಖಾಗಮನ ಬಯಸುತಿಹೆ
ವೆಂಬುದು.
ಮಾಲೆಯರ್ಪಿಸು, ನಾಡು ಕುಶಲವೆಂದರುಹು.
(ಚಾರನು ಮಾಲೆ ಕೈಗೊಂಡು ವಂದಿಸಿ ತೆರಳುವನು)
ದೇ— ಭಯದ ಬಲೆಯೊಡ್ಡಿರುವ ಜಯದಪಾಯವ ನೆನೆದು
ಕಡು ಖಿನ್ನವಾಯ್ತು ಮನ, ಶಾಸನದ ಭಂಗದಲಿ
ನಾಡಜೀವನ ಭಂಗ.
ನೀ— ಶುಭವನೇ ಹಾರೈಸು,
ನಿರ್ಭಯದೊಳಿರು ಸಖಿ! ಧೈರ್ಯವೇ ಪರದೈವ,
ವಿಪದವನು ದಾಟಿಪುದು, ವೀರರಾಧಾರವದು,
ವೀರಗುವರಿಯು ನೀನು, ಕಲಿಚಾಗಿಯರಸಿ,

ನಾರೀಜನಕೆ ರನ್ನಮೆನಿಸಿರುವೆ, ಸೈರಿಪುದ
ನೀಬಲ್ಲೆ; ಬಳಲದಿರು, ಕೇಡ ಭಾವಿಸಬೇಡ.

ದೇ — ಆವ ಸಾರ್ಥಕಮುಂಟು ಎನ್ನ ಸೈರಣೆಗೆ?
ಎನಿತು ಪೇಳಿದರು ನುಡಿ ಕೇಳದಾದನೆ? ಇಂತು
ಮಹದಚಾತುರ್ಯ ಸಾಹಸಕೆ ತೊಡಗಿದನೇ
ಇನಿಯ ಬರುವನೆ? ಎನ್ನ ಸುಡಿಸುವನೇ? ಅಕಟಾ
ಸಂತಾಪವಿದು ಆವ ಪಾಪವೋ ಕಾಣೆನೇ
ಅನ್ಯಾಯವಾದಂತೆ ಭಾಸವಾಗುತಲಿದೆ;
ಎನ್ನ ಅಪರಾಧವೇನೆಂದು ಭಾವಿಸುವೆ
ಮುಂದೇನೋ? ಏನೊಂದು ಬೋಧೆಯಾಗದಿದೆ

ನೀ — ಧರ್ಮದೊಂದಸಮಾನ ಮಹಿಮೆ ಇಂತಿಹುದಮ್ಮ.
ಅದ ನಂಬಿದರಿಗಿಲ್ಲ ನೆಮ್ಮದಿಯ ಬಾಳು.
ಗತಿಯ ನೀಡುವುದಾಗೆ ಸುಖವಿಧಾನದೊಳಿಲ್ಲ.
ಪಸಿವು ಪೆರ್ಚಿದ ಧರ್ಮಸಂದರ್ಭವೊಂದೊಂದು
ಈ ರೀತಿಯಾಗಿಹುದು. ಅಂತಲ್ಲದಿರೆ ಅಂದು
ಭೀಷ್ಮ ಕರ್ಣಾದಿಗಳು ಪಾಪದಿಂ ಮಡಿದರೇ?
ಧರ್ಮಪುಷ್ಟಿಗೆ ಕೆಲರು ಬಲಿಯಾಗಲೇಬೇಕು.
ಅದಕಾಗಿಯೇ ಮುಡಿಪು ಕೆಲವು ಜನ್ಮಗಳು.

ಮ — ಸದ್ವಿಚಾರದ ನೆನಹನಿತ್ತೆ ನೀಲಬ್ಬೇ!
ಭಾರತದ ಪುಣ್ಯ ಪುರುಷರ ಪೆಸರ ನುಡಿದೆ.

ದೇ — ಹಿತವೆನಗೆ ಭಾರತವು, ಕಲಿಕಾಲ ಕರ್ಣಂಗೆ
ನಾನಣುಗಿಯಲ್ತೆ? ಕರ್ಣನೆನಗಭಿಮಾನಿ,
ಆರಿಂದ ಭಾರತವು ಪರಮ ಸುಂದರವಾಯ್ತು?
ಸ್ಮರಿಸಿದರೆ ಸಾಕಲ್ಲ, ಬಗೆಹಗುರವಾಗುವುದು.
ಕ್ಷಾತ್ರ ತೇಜವ ಮೆರೆದ, ಆ ಧರ್ಮಕ್ಷೇತ್ರವನು
ಕಂಡವರ ಸೌಭಾಗ್ಯವೆಂತುದೋ.

ಮ — ಎಂತುದೋ

ಅಂದಿನಾ ಭಾರತವು ಇಂದೆಮ್ಮ ಬಾಳುವೆಗು
ಹೊಂದಿಬರುತಿಹುದಲ್ಲ;

ನೀ — ಅದುವೇ ಪ್ರಭಾವ.
ನಮಗಿಂದು ಬೇಕಾಯ್ತು, ಜಗಕೆಲ್ಲ ಬೇಕಾಯ್ತು.
ಎಲ್ಲ ಸಂದರ್ಭವೂ ಹಿತಬಂಧುವಂತಾಯ್ತು.
ಆರ್ತರಾಧಾರವಿದು, ನೊಂದರ ಸಮಾಧಾನ.
ದ್ವಾಪರಕೆ ಮುಗಿದಿಲ್ಲ; ಇಂದಿಗೂ ಮುಗಿದಿಲ್ಲ;
ಎಂದಿಗೂ ಮುಗಿಯದೀ ಭಾರತದ ಮಹಿಮೆ.

ಮ — ಅದಕೆ ಈದಿನ ನಿದರ್ಶನವಾಯಿತಲ್ಲವೇ?
ಕರ್ಣಾರ್ಜುನರ ಸಮರ ಸಂಧಿಯಿಂದೊದವಿತು.
ದಾಯಾದಿಗಳ ವೈರ, ಅಂದಾದುದಿನ್ನೇನು?
ಅಣ್ಣ ತಮ್ಮದಿರ ಕಾಳಗ, ಏನು ಕೌತುಕ,
ನಂಟತನ ನೂಕಿದರು ಅಭಿಮಾನವೀಡಾಡಿ.

ದೇ — ನಿಯಮ ಪಾಲನೆಯಲ್ಲಿ ಅಭಿಮಾನ ಕೆಡೆಯೆಲ್ಲಿ?
ಜೀವದಲಿ ಹಂಗುಳಿದು ಕಾವುದೀವುದು ಧರ್ಮ.
ಭಾವಿಸದೆ ಬಾಂಧವ್ಯ ಇರಿದು ಕೊಲ್ಲುವುದು ನೇಮ.

ಮ — ಏತರದು ಮರ್ಮವಿದು.

ನೀ — ಬಲು ಸೂಕ್ಷ್ಮವಾಗಿಹುದು.

ದೇ — ಅಭಿಮಾನ ಗೌರವಕೆ ಧರ್ಮ ಬಲಿಯೇ? ಇಲ್ಲ,
ಧರ್ಮ ಗೌರವಕಾಗಿ ಅಭಿಮಾನ ಬಲಿಯೇ?
ಆ ಸೂಕ್ಷ್ಮವೇನೆಂದು, ಆ ಮರ್ಮವೇನೆಂದು
ವಿವರಿಪೆಯ ನೀಲೇ!

ನೀ — ತಿಳಿದುದನು ಬಿನ್ನವಿಪೆ.
ಧರ್ಮಾಭಿಮಾನಗಳ ಬಲಕೆ ಬಲಿ ಬೀಳುವುದು
ತ್ಯಾಗ ಜೀವನ ಮಾತ್ರ. ಈ ಧರ್ಮ ಸಂಕಟವು
ಸಮಯವನು ಪೊಂಚಿದ್ದು, ಸತ್ವವ ಪರೀಕ್ಷಿಪುದು
ಅದುವೆ ವೀರರ ಪರ್ವಕಾಲ.

ದೇ — ಸಮನಿಸಿತೀಗ
ಆ ಪರ್ವಕಾಲ ವೀದಿನ, ಈ ಪರೀಕ್ಷೆಯಲೇನು
ಸಾಧಿಪುದೋ ಸಮಯ?
ಮ — ಎಂತಾದರಾ ನೆನಹೆ
ಬರುತಲಿದೆ ನಿನಗೆ.
ದೇ — ನಾವೀಗ ರಣರಂಗದಲೆ
ನಿಂದಂತೆ ತೋರುತಿದೆ ಆಘೋರ ಯುದ್ಧದಲಿ
ಜನರೆನಿತು ನೊಂದರೊ? ಎನ್ನ ದುಃಖವನದಕೆ
ಪೋಲಿಸುತ ಭಾವಿಸಿದೆ. ಕರ್ಣನೆಂತಹ ವೀರ,
ಕುಂತಿಯಂತಹ ಮಾತೆ, ಅವನ ಭಾಗಕೆ ಮೃತ್ಯು,
ಆವ ಮರ್ಮವೋ, ಏನು ಸಾಧನೆಯೋ, ದೈವಕೆ?
ನೀ — ಮರ್ಮವೋ ತಂತ್ರವೋ ಬಲು ಚೋದ್ಯವಾಗಿಹುದು.
ಅಸಮಾನ ಸಾಹಸಿ, ಮಹೋದಾರಿಯಾಕರ್ಣ,
ಭಂಗವೊಂದೇ ಪುರಸ್ಕಾರವಾಯಿತು, ಜೀವ
ನೊಂದು ನಂದಿತು. ದೈವ ಪ್ರತಿಕೂಲವಾಗಿಯೂ
ಊಳಿಗದ ಶ್ರದ್ಧೆಯೇ ಬಾಳನುದ್ಧರಿಸಿತು.
ಮಾನಾಪಮಾನಗಳ, ಹಾನಿ ವೃದ್ಧಿಗಳೊಂದ
ಗಣಿಸದೆಯೆ ವೀರ ವೈರಾಗ್ಯವನು ಬೋಧಿಸಿದ;
ರಸಪೂರ್ಣ ಹೃದಯ ನಾ ವೀರವರ. ನಿಶ್ಚಲದ
ನಿಶ್ಚಯದ ನಿಷ್ಠೆಯಲಿ, ನಿಃಸ್ವಾರ್ಥ ಜೀವನದಿ,
ಜನ್ಮವರ್ಪಿಸಿದ ಕರ್ಣನ ಬಾಳೆ ಬಾಳಲ್ತೆ!
ಅವನ ಜೀವವೆ ಜೀವ, ಅವನ ಸಾವೆ ಸಜೀವ;
ಅವನಿತ್ತುದೇ ಲೇಸು, ಅವನಿದ್ದುದೇ ಸಾಕು.
ಈವುದೂ, ಕಾವುದೂ, ನೋವುದೂ ಸವಿಯಾಯ್ತು;
ಸಾವು ಸುಂದರವಾಯ್ತು, ಪತನವೇ ಹಿತವಾಯ್ತು.
ದೇ — ಪತನವೇ ಹಿತವಾಗಿ ವೀರರಭ್ಯುದಯವನು
ಸಾರುತಿದೆಯಲ್ಲವೇ? ಆ ಧರ್ಮಸಾಫಲ್ಯ
ಇಂತಪ್ಪುದೇ ನಿಯಮ. ಏನು ವ್ಯಾಪಾರವಿದು,

ದ್ರೋಹಕೇ ಸನ್ಮಾನ, ವಂಚನೆಗೆ ಉಪಕಾರ
ಸಲ್ಲುತಿದೆ, ನ್ಯಾಯದಾ, ಸತ್ಯದಾ ಗತಿಏನು?
ನೀ — ನಿಯಮವನು ಮೀರಿದಾ, ನ್ಯಾಯಕ್ಕೆ ನಿಲುಕದಾ
ನೀತಿ ಆ ದೈವಕೆ. ಆ ನ್ಯಾಯ ನಿರ್ಣಯವ
ಪರಿಕಿಸುವರಾರಿಲ್ಲ, ಪ್ರಶ್ನಿಸುವರೂ ಇಲ್ಲ.
ದೇ — ಆವುದೂ ಚಿರವಲ್ಲ, ಸಹಜಸಂಭವವಾದ
ಸಾವೊಂದೆ ನಿಶ್ಚಯ. ಸಾವು ಪಾವನವಾದ
ವೀರಜನ್ಮದ ಮಹಿಮೆ ವಿಸ್ತಾರವೆನಿತು?
ಶೀಲದಾಶ್ರಯದಲ್ಲಿ ಪ್ರೇಮ ಶಾಶ್ವತವಾಯ್ತು,
ಗೆದ್ದರೇನಿದ್ದಪರೆ? ಬಿದ್ದರೇ ನಳಿದಪರೆ?
ಬಿದ್ದವರ ತ್ಯಾಗದಲಿ ಉದ್ಧಾರವಾಯ್ತು ಜಗ;
ಎದ್ದೇಳುತಿದೆ ನೀತಿ; ಆ ಪುಣ್ಯ ಬೆಳೆಯುತಿದೆ.
ನೀ — ಬಿದ್ದಮೇಲಿದ್ದುದೇ ಬಾಳು, ಬಾಳಿನ ಗೆಲವು.
ಆ ಗೆಲುವನಾಂತರಲಿ ಅಗ್ರಗಣ್ಯನು ಕರ್ಣ;
ಅವನೇ ಚಿರಾಯು.
ದೇ — ಚಿರವೀರಚರತೆಯು ಮನವ
ಎಚ್ಚರಿಸಿತೀಗ, ಕಲಿಗುಚಿತವಾಗಿಹ ಕಜ್ಜ
ರಮಣನೆಸಗಿದನಲ್ತೆ? ಈ ಸಮಯ ಸರಿವುದೇ?
ಮ — ಬೇಸರದ ಇರುಳು ಸರಿದಂತೆಯೇ ಸರಿವುದು.
ನೀ — ಕಳೆದೀ ವಿಷಾದ ಸಂಬಂಧ ಮಲಿನವನೆಲ್ಲ
ಶುಚಿಯ ಸಂತಸವೆರಸಿ, ಶುಭದ ಮುಂಬೆಳಗಿನಲಿ,
ದೇವಮಂದಿರವೈದಿ ಬರುವ ಬಾ. ಏಳು ಸಖಿ
ಪ್ರಿಯ ಬರುವ ನೀದಿನವೆ. ಇನಿದಾಗಿ ಇದಿರಾಗು.
ದೇ — (ಸುತ್ತ ನಿರೀಕ್ಷಿಸುತ) ಆರದೋ ನೆರಳು ಚಲಿಸುವದಲ್ಲ.
ನೀ — (ಮಲ್ಲೆಯೊಡನೆ) ನೋಡಮ್ಮ
(ಚಾರನು ಬಂದು ದೂರದಲ್ಲಿ ನಿಲ್ಲುವನು. ಮಲ್ಲೆಯೂ ಬರುವಳು)
ಮ — ಹಿಂತಿರುಗಿ ಬರಲೇಕೆ? ಅರಸರೈತಂದರೇ?
ಚಾ — ಇಲ್ಲ ದಂಡಾಧಿಪರು.

ಮ — ಬೇಗನುಡಿ
ಬಾ— ಬಾಗಿಲಲಿ
ನಿಂದು ಸಮಯವ ನೋಡಲಟ್ಟಿದರು.
ಮ — (ಮುಂದೆಬಂದು) ನೀಲೇ !
ದಂಡ ನಾಯಕನು ಬಂದಿಹನಂತೆ
ದೇ — ನಾಯಕನೆ?
ನಡೆ ಬೇಗ ಬರಮಾಡು (ಮಲ್ಲೆಯು ಹೋಗುವಳು)
ತಲ್ಲಣಿಸುತಿದೆ ಮನವು
ನಾಯಕನ ಬರವೇಕೋ? ಏನು ವಾರ್ತೆಯೊ ಕಾಣೆ.
(ಮಲ್ಲಬ್ಬೆಯೊಂದಿಗೆ ದಂಡನಾಯಕನು ಬರುವನು)
ದೇ — ನಾಯಕಾ! ಏನು? ನೀನೊರ್ವನೇ ಬಂದೆಯಾ?
ಏಕಿಂತು ಮೌನದಲಿ ನಿಂದಿರುವೆ? ಏನಾಯ್ತು?
ನಿಮ್ಮೊಡೆಯರೆಲ್ಲಿಹರು?
ದಂಡ — (ಗದ್ಗದ ಸ್ವರದಲ್ಲಿ) ಏನೊರೆವುದೋ ತಾಯೆ.
ನೀ — ಏನಾದರಿರಲಿ, ನಿರ್ಭಯದಿ ನುಡಿ
ದಂ — ನಿನ್ನಿನಾ
ಜಯವಾರ್ತೆಯಟ್ಟಿದೆವು.
ನೀ — ಚಾರಪೇಳಿದನೆಲ್ಲ.
ದಂ — ನಡೆದುದೆಲ್ಲವ ತಿಳಿದನಾಗಲೇ ಚೋಳನೃಪ.
ದೇ — ಮುಳಿದನೇ?
ದಂ — ಮುಳಿಸು ಮುಗಿಲೇರಿದುದು, ಅಕಟಾ!
ನಮ್ಮ ಕೈಮೀರಿದುದು.
ದೇ — ಏನೇನು, ಏನಾಯ್ತು?
ದಂ — ವಿಧಿ ಕ್ರೂರವಾಯ್ತು.
ದೇ — ನಮ್ಮರಸರೆಲ್ಲಿಹರೀಗ?
ಎಲ್ಲಿಹರು......ಎಲ್ಲಿಹರೋ
ದೇ — ಬೇಗ ನುಡಿ ನಾಯಕಾ!
ದಂ — ಘೋರವೊರೆಯುವ ಪಾಪವೆನ್ನದಾಯ್ತೀಗ

ನೀ — ಎಂತಾದರೂ ತಿಳಿಸದಿರೆ ತಪ್ಪದಣ್ಣಾ !

ದಂ — ಪೇಳುವೆನು ತಾಯೇ, ಮಲ್ಲಯುದ್ಧ ವಿರುದ್ಧ
ಶಾಸನವ ಮೀರಿ, ಜಗಜಟ್ಟಿ ಚೋಳರ ಮೇಳ,
ಮಲ್ಲನಂ ಜಯಿಸಿ, ಕೊಂದುದಕಾಗಿ ನರಪತಿಯು
ದಂಡನೆಯನಿತ್ತ, ನಮ್ಮರಸಂಗೆ

ದೇ — ಆವುದೋ ?

ನೀ — ಏಕೆ ಅನುಮಾನಿಸುವೆ ? ಆವ ದಂಡನೆಯಾಯ್ತು ?

ದಂ — ಅದಕಾಗಿಯೇ ವಿಧಿಸಿಹರು,

ನೀ — ಅದೇ ವಿಧಿಯೇ ?

ದಂ — ಅಂತೆಯೇ ತೀರ್ಮಾನ.

ನೀ — ಛೀ, ಛೀ ಅನ್ಯಾಯ.

ದೇ — (ಉಸುರ್ಗರೆದು ತತ್ತರ ಪಡುತ)
ಇನಿಯನಿರುವೆಡೆಗೈದೆ ಬೇಗಲಣಿಮಾಡುವುದು.

ದಂ — ಅಣಿಮಾಡಲೇನಿಹುದು ? ಹತಭಾಗ್ಯವೆಮ್ಮದು.

ದೇ — (ಹತಾಶಳಾಗಿ ಗಾಬರಿಯಿಂದ)
ಏನಾದನೆನ್ನರಸ ? ಬಂಧಿಸಿಹರೋ ? ಇಲ್ಲ
ವಧ್ಯಭೂಮಿಯ ಕಡೆಗೆ ಸೆಳೆದೊಯ್ದರೋ, ಪೇಳು.

ದಂ — ಎಲ್ಲ ತೀರಿತು ತಾಯೆ. ಬೆಳಗು ಮುಂಜಾವಿನಲೆ
ನವಿಲೆ ನಾಡಧಿಪತಿಯು ತೊರೆದ ನೀಲೋಕವನು.

ದೇ — (ಚೀರುತ್ತ) ಹಾ ಮಹಾದೇವಾ !

ನೀ — ಏನು ದುರ್ಘಟನೆಯೋ !

ಮಲ್ಲಬ್ಬೆ — ದೈವವೇ ! ಕಣ್ಣಿಲ್ಲ ನಿನಗೆ ? ಏನೆಸಗಿದೆ ?
ಅಯ್ಯಯೋ ! ಎಂತಹ ಅನ್ಯಾಯ, ಗೆಳತೀ,
ಎಂತು ಸಹಿಸುವೆಯೋ, ಎಂತು ಸಂತೈಪುದೋ ?

ನೀ — ಆವ ಮಾತುಗಳುಂಟು ನಿನ್ನ ಸಂತವಿಪುದಕೆ,
ದೇಕಲೇ ! ನಿನಗಿಂತ ಬಲ್ಲಿದರು ನಾವಲ್ಲ.

ದೇ — ಇಂತು ಕೊನೆಗಂಡುದೇ, ಕೊನೆಗಂಡುದೇ ಬಾಳು.
ಭಾವಿಸಿದುದೆಲ್ಲ ಅನುಭವಮಾಯ್ತು ಸಖಿಯರೇ.

ನೀ — ಆರಿಗಾರಿಹರೆಲ್ಲರೀಜಗದ ಸಾಲವನು
ತೀರಿಸಲು ಬಂದವರು. ಪುಟ್ಟು ಸಾವುಗಳಲ್ಲಿ
ತಿರುಗುತಿವೆ ಜನ್ಮಗಳು, ಇದಮೀರಿದವರಾರು ?

ಮ — ಸೌಭಾಗ್ಯ ಬಲಿ ಬಯಸಿದಳು ಕ್ರೂರಕಾಳಿ,
ನಿನಗಲ್ಲ ನಾಡಿಗೇ ಭಾಗ್ಯಬಲ ಉಡುಗಿತು.
ನಾಡಿನಾ ಪಾಡೇನು ? ಮುನ್ನ ಬಗೆ, ದಿಕ್ಕಾರು ?
ನಿನ್ನೊಲವೆ ಬಲವಿನ್ನು, ನಿನ್ನ ನುಡಿಯೊಳಗಿಹುದು
ಮುಂದಿನಾ ಕಜ್ಜವೆಲ್ಲವು. ನಾಡಭದ್ರತೆಯ
ಬಗೆವುದೇ ಮೊದಲ ಕರ್ತವ್ಯವಲ್ಲವೆ ಗೆಳತಿ ?

ನೀ — ಜನವ ಮುತ್ತಿಹ ಮಹಾ ಭಯ ದುಃಖಗಳ ನಿನ್ನ
ಮಮತೆಯಲಿ ಮರೆಮಾಳ್ಪ ಕಣ್ಣೋಟವೆಸೆದೊಂದು
ಮಾತ ನೀನಾಡು. ತಾಯಲ್ತೆ ? ನಿನ್ನಯ ಪ್ರಜೆಯ
ಕ್ಷೇಮವನು ಹಾರೈಸದಿರಲೆಂತು ದೇಕಬ್ಬೆ ?
ಆ ಮಮತೆಯೇ ಸಕಲ. ಪ್ರತ್ಯಕ್ಷದಲಿ ನಮ್ಮ
ಪಾಲ್ಗೆ ಬಂದುದನೆಲ್ಲ ನಂಬುವ ಸಮಾಧಾನ
ಮಾತ್ರವೆಮಗಾಧಾರ. ಕಾಣದಿಹ ಕತೆಬೇಡ.
ಕಣ್ ಬಯಸುವುದು ಸತ್ಯ, ತಿಳಿವ ಬೆಳಗಿಸು ತಾಯೆ.
ತೊಲಗಿಸೀ ಬೆಸನವನು, ಮುಳಿದು ಫಲವೇನಿನ್ನು ?
ಸಂತಾಪ ಸಮಯವಿದು. ಮನವ ತಿರುಗಿಸು, ಮರೆಸು
ಮುನ್ನಿನಾ ನೋಟವನು.

ದೇ — ಹಿಂದೆಲ್ಲವನು ತೊರೆದು
ಮುಂದನೇ ಬಗೆಯುತಿಹೆ; ಬಗೆಯಲೇನಿಹುದಿನ್ನು ?
ನೋಡಲೇನಿಹುದಿನ್ನು ? ಜಗವೆ ಬರಿದಾಯ್ತೆನಗೆ.
ಭಯ ಮಾಯವಾಯ್ತು, ದುಃಖವು ದೂರ ತೊಲಗಿತು.
ಮನದ ನಿಶ್ಚಿಂತೆಯನುಭವ ಮಾದುದೀಗ.
ನಾಯಕ ! ಶಾಸನಕೆ ನಮ್ಮ ದೊರೆ ಬಲಿಯಾದ
ತಾವಾವುದೋ ಪೇಳು, ತನುವೇನ ಗೈದಿರಿ ?

ದಂ — ರಾಜಾಜ್ಞೆಯರುಪಿ ತಲಕಾಡಿಗೊಯ್ದರು ದೊರೆಯ,
ಬೆಂಬಿಡದೆ ನಾ ಪೋದೆ. ಕಡೆನುಡಿಗಳಾಲಿಸಿದೆ.
ಧರೆಗೆ ಬೀಳದ ಮುನ್ನ ಒಡಲಿಗೆನ್ನೊಡಲೊಡ್ಡಿ,
ಪಡೆದು ತಂದಿಹೆನೆಮ್ಮ ನಾಳ್ದನ ಕಳೇಬರವ.

ದೇ — ಮಲ್ಲೆ ! ತಿಳಿಸೆಲ್ಲವನು ಪಿರಿಯರಿಗೆ; ಈಗಳೇ
ಕರೆತರುವುದೆನ್ನ ಪಡೆದರ. ನಾಯಕಾ ! ನಮ್ಮ
ನಾಡಿಗೀವಾರ್ತೆಯನು ಕಳುಹು. ಪತಿಯೊಡವೆರಸಿ
ಸತಿಯಾಗಲಿಹೆನೆಂದು. ಇಂದಿಗೇ ಕಡೆನೋಟ,
ಸಾರಿಪೇಳುವುದಿಂತು.

ನೀ — ಏನಿದೀ ವಿಪರೀತ ?
ಸಖಿ ! ದುಗುಡದುಬ್ಬೆಗದಿ ದುಡುಕಿ ನುಡಿಯಲು ಬೇಡ.
ಉಚಿತವಾದುದ ನೆನೆದು, ನೆಮ್ಮದಿಯ ತಾಳಿನಿತು.

ದೇ — ನೆಮ್ಮದಿಗೆ ಉಚಿತವಾದಿರವಾವುದೋ ಪೇಳು ?
ಧರೆಯ ಋಣ ತೀರಿಹುದು. ಇರವಿಲ್ಲಿಗಿನ್ನು ಹೊರೆ.

ನೀ — ಮರೆಯಬಹುದೆಲ್ಲವನು ಧ್ಯೇಯ ಸಾಧನೆಯಲಿ.
ಯತ್ನ ಮಾತ್ರವೆ ನಮ್ಮದಿನ್ನುಳಿದುದರ ಚಿಂತೆ
ನಮಗೇಕೆ ಬಿಡು ಗೆಳತಿ ! ಭ್ರಾಂತಿ ವಶಳಾಗದಿರು.

ದೇ — ಧ್ಯೇಯ ಸಾಧನೆಯೆಲ್ಲ ತುದಿಗಂಡುದೀ ದಿನದಿ.
ನ್ಯಾಯ ಸಾರ್ಥಕವಲ್ಲಿ. ನಿರಪಾಯದಾಶ್ರಯವ
ನಾ ಬಯಸುತಿಹೆ ನೀಲೇ ! ಭ್ರಾಂತಿ ಚಪಲಗಳೆಲ್ಲ
ದೂರವಾಯ್ತಾಗಲೇ. ಬಲವೆತ್ತು ಪ್ರೇರಿಸಿತು
ಮನದ ನಿಶ್ಚಯವಿಂತು. ಪೋ ಪೋಗು ಮಲ್ಲಬ್ಬೆ !
ನಾಯಕಾ ! ನೀನು ತೆರಳೀಗಲೇ. ಇದುವೇ
ಮೊದಲಾಜ್ಞೆ ಅಂತದನೆ ಕಡೆಯಾಗಿ ತಿಳಿವುದು.

[ಮಲ್ಲಬ್ಬೆ ದಂಡನಾಯಕರಿಬ್ಬರೂ ತೆರಳುವರು]

ನೀ — ಉಚ್ಚತತ್ವಗಳರಿತ ಸುದತಿ ನೀನಿಂತೇಕೆ
ಮರುಳಾಯ್ತು ಮತಿ. ಚೇತನವ ಚೇತರಿಸಲಿನಿತು
ಅವಕಾಶವಿತ್ತು ಚಿಂತಿಸಿನೋಡು. ಬಲ್ಲಿದರ

ಅಭಿಮತವನೀನರಿತು, ನ್ಯಾಯವನು ನಿಶ್ಚಯಿಸು.
ರೋಷಾತಿರೇಕದಲಿ, ಚಲವ ಸಾಧಿಪುದೊಳಿತೆ?

ದೇ — ಮರುಳಲ್ಲ; ಮತಿ ಮೋಸವಶವಾಗಲಿಲ್ಲೆಂತು.
ಸೌಮ್ಯ ಸಾಹಸವೆನದು. ಸಹಜವೆಂದೊಲಿದೆ.
ಮಸಣವಿಂದೆನಗೆ ಮದುಮನೆಯು ನಿಜವಾಗಿ
ಅಂದಿನಿಯ ನೊಡಗೊಂಡು, ಬೀದಿಯುತ್ಸವದಿ,
ಮೆರೆದಂತೆ ಮೆರೆವೆ ನಾನಿಂದು ಶುಭೆಯಾಗಿ.
ಅಶುಭ ವೆನಗೆಂದೆಂದು ಸೊಂಕದಂತಿರಲೆಂದು
ಬಯಸುತಿಹೆ ಚಿರಕಾಲ ಸೌಭಾಗ್ಯ ಪದವಿಯನು.

ನೀ — ಬರುತಿಹರು ನಿನ್ನ ಪಡೆದವರು ನೋಡಮ್ಮಾ!
ಮುದಿಯರಲಿ ದಯೆತೋರು, ಮುಗಿಯದಿಹ ಶೋಕದಲಿ;
ಅವರನಿರಿಸುವ (ನಿರಿಯುವ) ಕೆಟ್ಟಕಲ್ಪನೆಯ ಮರೆಮಾಡು
ಅಡಿಜಾರುತಿದೆಯವರ, ನುಡಿ ತೊದಲುತಿದೆ. ಒಡಲು
ತತ್ತರಿಸುತಿದೆ. ಕುಸಿದು ಬೀಳುತಾ ಬರುವವರನು
ನೋಡು; ಹಿತವನು ಮಾಡು. ಅವರಿಂದೆ ಪಿರಿದೇನು;
ಅವರ ಪರಿತಾಪಕ್ಕೆ ಪರೆಯಾಗಿ ನಿನ್ನ ಮರೆ;
ಅವರ ಕೈವಿಡಿದೂರುಗೋಲಾಗಿ ಮುಂದೆನಡೆ.

[ರವಿಗ, ಪೊನ್ನಬ್ಬೆಯರು ಮಲ್ಲಬ್ಬೆಯೊಂದಿಗೆ ಬರುವರು]

ರವಿಗ — ಮಡದಿ! ಕಡು ನಿರ್ಭಾಗ್ಯರಾದೆವು.

ಪೊನ್ನಬ್ಬೆ — ಬೆಂದುದೀ ಕರುಳು.
ಮುದ್ದುಗುವರಿಯು, ಕೋಮಲೆಯು, ದುರ್ಗತಿಯ ನಿಂದು
ನೋಡಲಾಗದ ತೆರದಿ ಈ ಕಂಗಳಿಂಗಿದೊಡೆ
ಕೊರಗೊಂದೆ ಕಾಡುವುದು.

ರ — ಅರಸಿ ನೀ ಬೋಧಿಪುದು.
ಮರಳಿಪುದು ಚಲದಿಂದೆ.

ಪೊ — ಮಗಳು ಚಲ ಮಾಣದಿರೆ

ಗತಿಯಾವುದೆಮಗೆ; ಭಾವಿಸೆ ಭಯಂಕರವೆ.
ದೈವವೇ! ಈ ವಿಪದವೆಂತು ದಾಟಿಪೆಯೋ?

[ಮಗಳ ಬಳಿಗೈದುವರು]

ದೇ — (ಕಾಲ್ಗೆರಗುವಳು)
ಪ್ರೊ — (ಬಿಗಿದಪ್ಪಿ) ಮಗಳೆ! ನಿನ್ನಯ ನಗೆಯೊಳಿತ್ತೆಮ್ಮಸಿರಿಯೆಲ್ಲ.
ಸಹಿಸದುಬ್ಬಸದಿಂದೆ ಶಾಪವಿಕ್ಕಿದರಾರೋ.
ವಿಭವ ಕಳೆದುದು, ವಿಧಿಯ ಹಳಿವ ತೆರೆನಾಯ್ತು.
ದೇ — ಬಾಳು ಬೀಳಾಗಿರಲು ವಿಭವವೆತ್ತಣದಮ್ಮ.
ವಿಭವವಿಲ್ಲದ ಬಾಳದೊಂದು ಬಾಳೆನಿಪುದೇ?
ರ — ಬೀಳಲ್ಲ ತಾಯೆ, ನೀನೆಂದೆಂದು ನಮಗೊಂದೆ.
ಪ್ರೊ — ನೀನೆ ಸರ್ವವು ನಮಗೆ, ನಿನ್ನಿರವೆ ನಮ್ಮಿರವು.
ನೀನೆಸೆವ ನೋಟವೇ ನಮ್ಮಸಿರು, ಮಗುವೆ!
ರ — ವಯಸು ಪಿರಿದಾದರೆಯು, ನಿನ್ನ ಸುಖ ಸಂತಸದ
ಉಲ್ಲಾಸದಿಂದೆಳೆಯರಂತೆ ಸುಖವಿದ್ದೆವು.
ನಮಗಾಗಿ ಮಗಳೆ, ನೀನೆದೆಗೆಡದೆ, ಏನೊಂದ
ಭಾವಿಸದೆ, ಕಾಯಬೇಕೆಮ್ಮಸೌದಾರ್ಯದಲಿ.
ಲೋಭ ವಶಳಾಗದಿರು. ಮೋಹವಶಳಾಗದಿರು.
ದೇ — ತಂದೆ! ಈ ಜಗವೆಲ್ಲ ಸಟೆಯಸಂತೆಯೊಲಿಹುದು.
ರ — ಜಗಕೆ ಬಂದಿಹೆವಲ್ಲ; ಅಲೆದು, ಬದುಕಲೆಬೇಕು.
ದೇ — ಏನಿಹುದು ಜಗದೊಳೆನಗಿನ್ನು?
ಪ್ರೊ — ನಾವಿಹೆವಮ್ಮ.
ನೀ — ನಿನ್ನ ನಾಡಿಲ್ಲವೇ?
ದೇ — ನಾಡ ಹಿತವಿಂತಕ್ಕೆ.
ದಂಡನಾಯಕಗೆ ನಾಡೇ ದೈವವಾಗಿಹುದು.
ಇಂದಿನಿಂದಾತನೇ ನಾಡಿಗಧಿಪತಿಯು.
ಎನ್ನ ಜೀವದ ಗೆಳತಿ ಒರ್ವಳಾತನನು
ಕೈವಿಡಿದು, ನಾಡ ಕೈಬಿಡದಂತೆ ರಕ್ಷಿಪುದು.
ಎನ್ನ ಪ್ರತಿನಿಧಿಗಳೆನ್ನಯ ತಂದೆತಾಯ್ಗಳಿಗೆ

ಈ ಸಖಿಯರೆನ್ನೆರಡು ಕಣ್ಣುಗಳು. ನೀಲಬ್ಬೆ !
ಮಲ್ಲಬ್ಬೆ ! ಎನ್ನಾಶಯುವ ನಿರಾಕರಿಸುವಿರೆ ?

ಮ — ಏನು ಪೇಳುವೆ ನೀಲೆ. ಏನೊಂದು ತೋರದೇ ?

ನೀ — ದೇಕಬ್ಬೆ ! ಏನೊಂದು ಉತ್ತರವ ಕೊಡುವುದಕು
ಅಸಮರ್ಥರಾಗಿಹೆವು ದಿಙ್ಮೂಢರಾಗಿ.
ಅಭಿಮಾನ ಪಾಶದಲಿ ಬಂಧಿತರು ನಾವೀಗ ;
ಸಮ್ಮತಿಸಲೊಲ್ಲೆವು ; ನಿರಾಕರಿಸಲಾರೆವು.

ದೇ — ಸಮ್ಮತಿಪುದೇ ನ್ಯಾಯ. ಪಿರಿಯರೆಲ್ಲರು ಕೇಳಿ.
ಸತಿಪದವ ಸಾರಲಿಕೆ ಅನುಮತಿಯ ನೀಡುವಿರೆ?

ರ — ಮಗುವೆ ! ಏನಿದು ನಿನ್ನ ಮಾತು ಬಿಡು ಸಾಕು.
ಪ್ರಾಪ್ತವಾದುದನೆಲ್ಲ ಅನುಭವಿಪುದೇ ಬದುಕು.
ಈ ಸಾಹಸವ ಮಾಣು.

ನೀ — ಸೌಮ್ಯ ಸಾಹಸವೆಂದೆ;
ಸಹಿಪುದೊಂದಸಮಾನ ಸೌಮ್ಯ ಸಾಹಸವಲ್ತೆ ?

ಮ — ಹಿರಿಯರಭಿಮತದಂತೆ ಆಚರಿಸು ಗೆಳತೀ.

ಪೊ — ಪ್ರಾಪ್ತಿಯೊಗೆಯಲು ತರವೆ? ಪ್ರತಿಯ ಮಾಡಲು ತರವೆ ?

ದೇ — ಅದರ ವಿಷದಡುಗೆಯನು ಉಣ ಬಯಸಬಹುದೇ?

ಪೊ — ಕಂದ ! ನೀ ಜಗವರಿಯೆ, ಪಾಪ ಪುಣ್ಯದ ಬೆಳಸ,
ಬಾಳ್ಬಿಡದೆ ಭುಜಿಸುತಿದೆ. ಬಿಚ್ಚಿ ತೋರಿದೆ ಮರ್ಮ.
ಜೀವ ಮತ್ತೊಂದು ಜೀವವ ನುಂಗಿ ಬದುಕುವುದು.
ನೀರ ಪೀರುವವರೆಗೆ ಬೀಜ ಉಳಿದಿತ್ತು.
ತೆನೆಯ ನೀಡುವವರೆಗೆ ಪೈರು ಬದುಕಿತ್ತು.
ಬಾಳೆ ಗೊನೆ ಬಾಗುವುದು ; ಜೇನು ಹನಿಗಟ್ಟುವುದು.
ನಾಲಿಗೆಯ ಪಾಪವೇನಿದರಲ್ಲಿ ? ಅರಸಿದರೆ
ಎಲ್ಲಿ ದೋಷಕೆ ಮೂಲ? ಪುಣ್ಯದಾ ಬೆಳಸೆಲ್ಲ
ಅನ್ಯರುಪಕಾರವೆ. ಆಪಕಾರಣಕಾಗಿ

ನಿನ್ನ ವೈಭವವಿಂತು ಸೂರೆಯಾಗಲಿಬೇಕೊ?
ಅದನರಿಯಲಾಗದು.
ನೀ — ಮಾತೆಯೊರೆವುದು ಸತ್ಯ,
ಬಾಳಿ, ಬಾಳ್ಗಿಲಬೇಕು. ಪ್ರಕೃತಿ ಜೀವನದಂತೆ,
ವಿಸ್ಮಯ ವಿಧಾನವೀ ಧರ್ಮಪಾಲನ ರೀತಿ.
ಬಲು ವಿಚಿತ್ರದ ವಿಪರ್ಯಯವಾಗಿ ಮಲೆತಿಹುದು.
ನಾಶದಿಂ ಮೊದಲಾಗಿ ಕೊನೆಗೆಲ್ಲಿಯೋ ಸಿದ್ಧಿ.
ಧರ್ಮ ಗೌರವದ ಕಾಪಿನ ಭಟರು ಸಿಲುಕುವರು
ಎರಡುಗ್ರ ನಿಯಮಗಳ ರುದ್ರಮುಖ ಮಧ್ಯದಲಿ.
ನಿಯಮಗಳ ಸ್ಪರ್ಧೆಯಲಿ ನಿರಪರಾಧಿಗಳ ಬಲಿ.
ನಿಯಮದಾ ಯಜ್ಞದಲಿ ನಿರಪರಾಧವೆ ಪಶು.
ದೇ — ಆ ಯಜ್ಞ ಪೂರಣಕೆ ಪೂರ್ಣಾಹುತಿಯು ಬೇಕು.
ಆ ಚರಮ ಸಿದ್ಧಿಯ ಸುಯೋಗವೆನಗೀಗ.
ರ — ಮರುಳು ಕಲ್ಪನೆಗಳೇ ತುಂಬಿ ಬರುತಿವೆ ಮನಕೆ.
ಎಳೆತನದ ಬಾಳಿನ್ನು ಏನ ಕಂಡಿಹೆ ನೀನು?
ಪೊ — ಇಂದಿನೀ ಬಗೆಯುರಿಯು ಪೊಸತು. ನಾಳೆ
ಇಳಿವುದಿದು, ಅಂತಂತೆ ದಿನದಿನಕೆ ಮಾಯುವುದು.
ದೇ — ಕುಲಸತಿಯು ನಾನು, ಕುಲ ಗೌರವವ ಕಾಯುವೆನು.
ರ — ಕುಲದ ಗೌರವಕೇನು ಕುಂದಿಲ್ಲದಂತೆ ನೀ
ಬಾಳ್ವ ಪರಿ ನಾ ಪೇಳ್ವೆ; ಅದನೆಯಾಚರಿಸು.
ಈ ರೂಢಿ ಮೆಚ್ಚಿ, ಜನಭೀತಿ ಕಾರಣವಾಗೆ,
ನಿನ್ನ ಜೀವನ ಅನ್ಯರಿಚ್ಛೆಗೆ ಅಧೀನವೇ?
ನಿನ್ನ ಜೀವಕೆ ನೀನೆ ಅಧಿಕಾರಿ. ಈ ಜನ್ಮ
ಇರುವನಕ, ಜಗದ ಸಂಬಂಧವನು ತಾಳಿ,
ಬಾಳಿ, ಕೊನೆಗಾಣುವದೆ ಜನ್ಮದೊಂದುದ್ದೇಶ.
ಉದ್ದೇಶ ಭಂಗದಲಿ ಕುಲಕೀರ್ತಿ ಬೆಳೆವುದೇ?
ದೇ — ಕಾಣದಿಹ ದೋಷವನು ಜನುಮಕಾರೋಪಿಸಿ,
ಸಂದೇಹ ಪಾಪದಲಿ ತೊಳಲುವುದು ಸಾರ್ಥಕವೆ?

ಕಾರಣವ ತಿಳಿಸದಿಹ ಪ್ರಾಪ್ತಿಯಂಗೀಕರಿಸಿ,
ಗೌರವಿಸಿ, ಬಾಳಿ, ಸಾಧಿಪುದೇನು ಈ ಜಗದಿ?
ವೀರಸತಿಗಿಲ್ಲಿ ನ್ಯಾಯಾವಲಂಬನವೆಲ್ಲಿ?
ಹೀನ ಬರೆಹದ ಅನುಗ್ರಹಕೆ ನಾ ಮಣಿಯೆ.
ಅದು ನಿಷೇಧ; ವಿರುದ್ಧ; ಸತಿಯರಭಿಮಾನಕೆ.
ಆ ಬರೆಹವನು ತೊಡೆವುದೇ ಸಮಾಧಾನ.
ಸ್ವಾವಲಂಬನ ಪಥದಿ ಎನ್ನ ನಿರ್ಗಮನ.
ಎನಗೆ ಸಾವು ಶರಣ್ಯ; ಇಂದದಕೆ ಸನ್ಮಾನ.
ರ — ವಿಧಿವಿರೋಧವು ಸಾಕು. ಪ್ರತಿಕೃತಿಯ ಗೈವ
ಕುವಿಚಾರವಿದನು ಬಿಡು. ಕಸಮಲ್ಲ ಬಾಳೆಸೆಯೆ.
ದೇ — ಕಸದಿಂದ ಕಡೆಯಲ್ತೆ ದೆಸೆಗೆಟ್ಟಿರುವ ಬಾಳು.
ಪೊ — ಅಂತು ನುಡಿಯದಿರಮ್ಮ. ಇನಿತನರ್ಥವೆ ಸಾಕು;
ಇನ್ನೇನನೆಸಗದಿರು. ಕಾಲ್ವಿಡಿದು ಬೇಡುವೆನು.
ದೇ — ಎನ್ನೆಗಾದರು ಬಾಳು ಮಣ್ಣ ಬೆರೆವುದು ತಾಯೆ.
ಜಗದೊಳಾರಿಗೆ ಹಿತವ ನೀವುದೀ ಜನುಮ.
ನಗೆಯುಂಟೆ, ಸೊಗಮುಂಟೆ, ಸೊಬಗುಂಟೆ, ಏನುಂಟು?
ಶುಭವಹುದೆ, ಜನಮೆಚ್ಚಿ ಸಂಭಾವಿಸಲು ತರವೆ?
ಒಳಿತಾದ ಸಂಬಂಧವೆಲ್ಲಿ? ಸಂಭ್ರಮವೆಲ್ಲಿ?
ಜನದ ಕಣ್ಗೀಜನುಮ ಭಾರವಾಗುವುದಿನ್ನು;
ರ — ಪೊರುವ ಭೂಮಿಗೆ, ಪೆತ್ತರಿಗೆ
ದೇ — ಭಾರವಲ್ತು.
ಅಲ್ಲದಿರೆ ಎನ್ನನಾ ಪೊರುವುದೇ ಪೆರ್ಭಾರ.
ಸತಿಗೆ ತನದೆನುವಾವ ಸುಖವ ನೀಡಿದೆ ಲೋಕ.
ಜೀವ ಜೀವವನಂಬಿ, ಬದುಕು ಬದುಕನು ಹೊಂದಿ,
ಬಾಳುತಾ, ಸರ್ವವನು ಪಡೆವುದನ್ಯರ ಹಿತದಿ.
ಅಂತು ಪಡೆವಾಸರೆಯು ನೀಗಿದಾ ಬಳಿಕ
ಬಾಳಿಗೇನುಳಿದಿಹುದು? ಸರ್ವಭಂಗದ ಶೂನ್ಯ
ಸ್ಥಿತಿಯೊಂದೆ. ಅದು ಬಯಸಬೇಕೆ? ಕರಗತವಾದ

ಪುಣ್ಯಲೋಕದ ಪದವಿ ಕೈ ಬಿಡುತ, ಈ ನರಕ
ವಾಸದಲಿ ನರಳಿದರೆ ಸಿದ್ಧಿಯೊಂದಿತೆ ಜನುಮ?

ರ — ಎನಿತೊ ಜನ್ಮಗಳಾಗಿ ನರಜನ್ಮದಲಿ ಬಂದು
ಮಣ್ಣುಗೂಡಿಸೆ ಬಾಳ ಮತಿಗೇಡಿತನವಲ್ತೆ?
ಹೇಡಿತನ ವೆನ್ನರೇ ಬಲ್ಲಿದರು ಮುಗುದೆ ?
ಈ ಲೋಕದಾಬಾಳ್ವೆ ಏಕರೂಪದೊಳಿಲ್ಲ.
ಏಕಮತ, ಏಕಹಿತವಿಲ್ಲ; ಬಹುಮತ ಉಂಟು.
ಇನಿತು ಜನರಾಶಯ ನಿರಾಕರಿಸೆ ತಕ್ಕುದೇ?

ದೇ— ತಂದೆಯೇ ! ಉನ್ನತಿಗೆ ಉನ್ನತಿಯು ನರಜನ್ಮ.
ಅಂತೆಯೇ ಮಲಿನಕೂ ಆವಾಸ. ಉನ್ನತಿಯ
ಬಯಸುವೆವೆ; ಮಲಿನ ಕಳೆಯಲಿಬೇಕು ಮೊದಲು.
ಮಲಿನ ಕಳೆವುದೆ ಜನುಮ ಶುದ್ಧಿಮಾಡುವ ಕೆಲಸ.
ಇರವಶುಭವಾಗಿರಲು, ಮರಣ ಶುಭ ವಿತ್ತಪುದು.
ಅಶುಭವಂಗೀಕರಿಸಿ, ಚಿರಕಾಲ ಬಾಳುವೆನೆ?
ಶುಭವು ಸಮ್ಮತವಾಗಿ, ಶಾಶ್ವತದಲಿಹುದಾಗಿ,
ಮನನೆಚ್ಚಿರುವ ಸತ್ಯ ಪಥದಿಂದ ಪಿಂತಿರುಗಿ,
ಏನು ಸಾಧಿಪುದಿಲ್ಲಿ. ಸತ್ಯಪಥವಾವುದು ?

ನೀ — ಘೋರವಿದು, ಸೇರದು, ವಿರೋಧ ಸೃಷ್ಟಿಯಮತಕೆ;
ಆತ್ಮಘಾತವಿದಲ್ತೆ ಗೆಳತಿ, ನೀನರಿಯಾ?

ದೇ — ಘಾತವಲ್ಲವಿದಾತ್ಮ ಸಂಪ್ರೀತಿ, ಪ್ರಿಯಸಖೀ !
ಆತ್ಮ ನಿರ್ಮಲ. ದೇಹಸಂಬಂಧ ಮಲಿನದಲಿ
ನಿರ್ಮಲಾತ್ಮವು ನೋವುದುಚಿತವೇ? ತ್ಯಾಜ್ಯಕೆ,
ದೇಹವೇ, ಆತ್ಮವೇ, ತಕ್ಕುದಾವುದು ಪೇಳು.

ರ — ಬಲವಂತ ಮರಣದಲಿ, ದೇಹ ದಂಡಿಪುದರಲಿ,
ನೆಲಸಿರುವ ನೈರ್ಮಲ್ಯವೆಂತುದೋ ಕಂಡಿಹೆವೆ?
ದೇಹ ನೀತಂದುದೊ, ಪಡೆದುದೋ ಪೇಳೆನಗೆ?
ಅದನೊಗೆಯೆ ನಿನಗೆಲ್ಲಿಯಧಿಕಾರ

ದೇ — ತಂದೆಯೇ !
ಆರಿಗುಪಯೋಗವೆಂದೀ ತನುವ ಪೋಷಿಪುದು?
ಎನಗಿದರೊಳಭಿಮಾನ ವಿನಿತಿಲ್ಲವಾಗಿಹುದು.
ನಿರುಪಯೋಗದ, ಹೀನ ವಸ್ತು ನಾಶನದಂತೆ
ಇದನೊಗೆವೆ. ಎನ್ನ ಮತ ನಿಸರ್ಗದೊಂದು ಮತ.
ಸೃಷ್ಟಿ ಸಂಕಲ್ಪದಾ ಸಾನುಭೂತಿಯ ಪಡೆದು,
ಆ ಮತವ ನಾ ಸಮರ್ಥಿಸಿ ಮೆಚ್ಚಿಹೆನು. ಇಧಕೆ
ಪ್ರಕೃತಿಯೆಂತು ವಿರೋಧಿ? ನಿಷೇಧಿಸುವರಾರು?
ಉಭಯ ಸೌಲಭ್ಯ ಸಿದ್ಧಾಂತವಿದು. ಸಂದರ್ಭ
ತಾನಾಗಿ ಒದವಿರಲು ಬಿಡಲೆಂತು. ಈ ತ್ಯಾಗ
ವೀರಜನ್ಮಕೆ ಒಪ್ಪು. ತಡೆವಿರೆಂತಿದನು?
ಈ ಸ್ವಭಾವ ವಿರುದ್ಧ ಕ್ರಮವ ಮನ ನೆಚ್ಚಿಹುದು
ಅನಿಮಿತ್ತವಲ್ಲ. ದುರ್ಗತಿಯಿಂದ ಸದ್ಗತಿಗೆ
ಕೊಂಡೊಯ್ಯುವುದಿದು. ದೀನ ಜನ್ಮಿಗಳಿಗಾಗಿಯೇ
ದಯೆಯ ಪರಮಾವಧಿಯ ಒಂದನುಗ್ರಹವಿಂತು
ಕಡೆಯ ಸಾಧನವಾಗಿ ಲಭಿಸಿಹುದು ಲೋಕಕೆ.
ಈ ಕಲ್ಪನೆಯು ಕ್ರೂರವಲ್ಲ; ಈ ಯುದ್ದೇಶ
ಪವಿತ್ರತಮವಲ್ಲದಿರೆ ಇಂತು ಮರಣವನು
ಇಚ್ಛಿಸಲು ಸಾಧ್ಯವೇ? ಅದು ಸ್ನೇಹಪಾತ್ರವೇ?
ಪೊ— ಮರೆತೆ ನೀ ಪೆತ್ತವರ. ಅವರ ದುರ್ಗತಿಯ ನೀ
ಬಗೆದೆಯೊ? ಎಲೆ ಕಂದ! ಕಿಚ್ಚನೆಚ್ಚಿದೆ ನೀನು;
ಅದು ನಮಗೆ ಎದೆಗಿಚ್ಚು. ನೀನೆ ಪತ್ತಿಸಬಹುದೆ?
ಆರಿಸುವರಾರಿನ್ನು? ಆಧಾರವೇನಮ್ಮ?
ಮ — ಕರಗಿಸದೆ ತಾಯನುಡಿ ನಿನ್ನ ಮನ ಗೆಳತೀ.
ಎನಿತು ಮರುಗುವಳಿದನು ನೀಭರಿಸಲಪ್ಪುದೇ?
ವಿನಯ ನಿಧಿಯಾದ ಕುರುವನ್ದ ಕುಲದೀಪಕಿಯೆ!
ಒಲವೆಗಣಿಯಾದ ಕುಡಿಯರ ವಂಶಕಳಸವೇ!
ಉಭಯ ಕುಲದಭಿಮಾನ ದೇವತೆ! ನಿಧಾನಿಸು,

ನವಿಲ ಸೋಗಿನೊಳೆಸೆವ ನಿನ್ನಾ ನವಿಲೆನಾಡ
ನೆನೆ. ಸೊಬಗ ನೊಗೆವ ಬಗೆವೀಡು ನುಗುನಾಡು.
ನೆನೆ ನಿನ್ನ ತಾಯ್ನಾಡ; ನೀನಾಳ್ದ ನೆಲನ.

ದೇ — ಜನನಿ ಜನಕರೆ ಕೇಳಿ; ಗೆಳತಿಯರೆ ಕೇಳಿ.
ಬಾಳ್ಗೆ ಬಡಿದಿಹ ಕೆಟ್ಟ ದೃಷ್ಟಿಯ ನಿವಾರಿಸಲು
ನಂಬಿದೀ ಧ್ಯೇಯವನು ಬಿಡಲೊಪ್ಪದೊಪ್ಪದು.
ಜಗವು ಪೊಲೆಯೆಂಬುದೀ ತನುವ, ಇದನಾದರದಿ
ಪರಿಗ್ರಹಿಪರಾರು? ಅಗ್ನಿ ದೇವನು ಮಾತ್ರ.
ಧರೆಗೆ ಪೆರ್ಚಿದ ಪಾಪ ತನ್ನೊಳಡಗಿಪ ದೇವ
ಪಾವಕನೆ ಶರಣೆನಗೆ. ಮಂಗಳ ಮಹಾಸಿರಿಯ
ಸಹಿತ, ಸಗ್ಗವನೇರಿ, ಮೆರೆವೆ ನಾ ಚಿರವಾಗಿ.
ಇಲ್ಲಿರ್ದ ಸಕಲವನು ನಾಪಡೆವೆ ನಲ್ಲಿಯೇ.
ಶುಭವಿಭವದಾಲಯವನೈದುವೆನು ತಾಯೇ!
ಮರುಗದಿರು; ಸತಿಪಥನಿರೋಧ ಒಪ್ಪದು ನಿನಗೆ,
ಅನುಮತಿಯ ನೀಡೆನಗೆ.

ಪೊ — ಎನಿತು ನಿರ್ದಯಳಾದೆ;
ಎಲೆಕಂದ, ಕಲ್ಲೆದೆಯ ಕರಗಿಸಿನಿತಾರೆ, ಬಾ
ತರಳೆ (ಬಿಗಿದಪ್ಪಿ, ಮುದ್ದಿಟ್ಟು) ದಯೆಯಿಂದಧಿಕ
ಧರ್ಮವಾವುದು ಪೇಳು.
ದಯೆಗಾಗಿ ದೈವದಾಜ್ಞೆಯ ಮೀರಿ ನಡೆದು
ಜಯಿಸಿಹರು ಈ ಜಗವ; ನೀನಿಂತು ಸೋಲುವದೆ?
ಈ ಲೋಕ ಜಯಿಸಿದರೆ ಮೂಲೋಕದಾ ಗೆಲವು.
ಧಿಕ್ಕರಿಸದಿರು ಜಗವ, ದಯೆಗೆ ತಲೆಬಾಗಿರು.

ದೇ — ಪ್ರಿಯವಾದ ನುಡಿಯ ನಾಡಿದೆ ನೀನು ಸನ್ಮಾತೆ.
ಮಾತೃ ವಾತ್ಸಲ್ಯದಾ ಮಹಿಮೆಯೇ ಮುಂದಾಗಿ,
ಇಂತೆನ್ನ ಪಥವ ಮೆಚ್ಚಿಸಲಾರದಂತೆಸಗಿ,
ತಡೆಯುತಿದೆ ಇನ್ನೆಲ್ಲ ಭಾವವನು ಲಕ್ಷ್ಯವನು.
ಸೌಭಾಗ್ಯ ಪದವಿಯನು ಈ ಲೋಕ ವಿತ್ತಪುದೆ?

ನಾನಿಂದು, ನೀಮುಂದು, ಮಾತೆಯೇ ಈ ಜಗವ
ಬೀಳ್ಕೊಡಲಿ ಬೇಕಂತು. ದಯೆಯ ಕಾರಣವಿರಿಸಿ,
ನಮ್ಮುಪಕೃತಿಯ ನಾವೆ ಪಡೆವ ದೌರ್ಬಲ್ಯದಲಿ,
ಆವ ಪರಮೋದ್ದೇಶ? ಎಂತಹುದು ಆ ವಿಜಯ?
ಇಹದ ಬಾಳಿನೊಳನಿತು ವಿಶ್ವಾಸ ವಿರಿಸಲಿಕೆ
ನಾವು ಶಾಶ್ವತರೇ? ಇಂದಿನೀ ಸೋಲೇಕೆ?
ಮುಂದಿನಾ ಗೆಲವಿಗೆ. ಸೋತು ಗೆಲುವುದು ಲೇಸೋ,
ಗೆಲಿದು ಸೋಲುವುದೋ?

ಪೊ— (ಖಿನ್ನಳಾಗಿ ರವಿಗನೊಂದಿಗೆ) ಏನುಪಾಯವು ನಮಗೆ?

ರ — ಮಾರ್ನುಡಿಯಲಾರದಾ ಮೂಗರನು ಮಾಡುತಿಹೆ
ನಮ್ಮೆಲ್ಲರನು ಮಗುವೆ; ಎಲ್ಲಿತ್ತೋ ಈಶಕ್ತಿ?
ಎಂತಾದುದೀ ಬೋಧೆ? ಏನೊಂದನರಿಯದಾ
ಎಳೆ ಮನಸು, ಪೊಸಬಾಳು, ಎನಿತೆನಿತು ವೇಗದಲಿ
ಬದಲಾದುವೆಲ್ಲ? ಪರಮಾಶ್ಚರ್ಯ ದೇಕಲೇ!
ದಿಗ್ಭ್ರಾಂತರಾದೆ ವಸ್ವಾಧೀನರಾಗಿಹೆವು,
ನಮ್ಮ ಸ್ಥಿತಿಯೆಂತುದೋ ನೀನೆ ಭಾವಿಸಿ ನೋಡು.
[ದಂಡನಾಯಕನು ಬಂದು ಶಿರಬಾಗಿ ನಿಲ್ಲುವನು]

ನೀ — ಬಾ! ದಂಡನಾಯಕಾ! ಅಳಿಗಾಲದಲಿ ನಮ್ಮ
ಒಡೆಯರೇನಾಣತಿಯ ತನ್ನರಸಿಗಿತ್ತರೋ,
ಕಡೆಯ ಸಂದೇಶವೇನೊರೆದರೋ ತಿಳಿಸು.
ಈ ಮತವೆ ಸಮ್ಮತವೊ?

ದಂ — ಅಂತಲ್ಲವಂತಲ್ಲ,
“ಎನ್ನ ಮನ, ಎನ್ನೊಲವು, ಎನ್ನ ಜಸವೆಲ್ಲವೂ
ಎನ್ನ ನಾಡೊಂದೆ. ಭಾವಿಪುದೆಮ್ಮ ದೇವಿಯರ
ಎನ್ನಂತೆ, ನಾಡಿಂಗೆ ಸಲುವ ಹಿತವೆನ್ನಾತ್ಮ
ಸಂತೃಪ್ತಿ. ಭರವಸೆಯ ನೀಡುವಿರೆ ನಾಡಿಗರೆ!
ಎನ್ನ ಕಡೆಯಾಶಯವ ನಡೆಸುವಿರೆ ದೇವಿಯರೆ!”
ಎಂದು ನೆನೆ, ನೆನೆದು ಹಾರೈಸಿದರು.

ರ — ಕೇಳಿದೆಯ
ಮುಗುದೆ! ಪತಿಯಾಣತಿಯ ಪಾಲಿಪುದು ಸತಿಧರ್ಮ.
ಇನ್ನೆಲ್ಲ ಭಾವಗಳ, ನ್ಯಾಯ ನಿಶ್ಚಯಗಳನು
ಕಡೆಮಾಡು. ಮೊದಲಾಗಿ ನಿನ್ನಿನಿಯ ನಾಶಯವ
ನೆರವೇರಿಸುವ ಕಜ್ಜಗಳ ನೋಡು.

ದೇ — ಅದಕಿಂತ
ಮಿಗಿಲಾದ ಧರ್ಮಪಥ ಕಾಣುತಿಹುದೆನಗೆ.
ಪತಿಯ ಪದಗತಿಯಲ್ಲಿ; ಮತಿಯ ನಂಬುಗೆಯಲ್ಲಿ;
ಮೃತಿಯ ಕಾಣದ ಸಿದ್ಧಿಯಲಿ ಭದ್ರವಾಗಿಹುದು.
ಆ ಜೀವನ ಅನಂತ. ಸೌಭಾಗ್ಯ ಸಂಭ್ರಮದ
ಈ ಶುಭ ಮಹೋತ್ಸವದಿ ಪುಣ್ಯ ಭಾಜನರಾಗಿ;
ಇದು ಮಹಾಯಾತ್ರೆ. ಅನುಗೊಳಿಸಿರೆಲ್ಲವನು.
ಅರಿದಾದ ನಿತ್ಯಸುಖ ನಿರ್ಮಿಸಿಹ ಧರ್ಮವಿದು.
ಸಾವಿಲ್ಲ, ನೋವಿಲ್ಲ, ಭವದ ಭಾವವೆ ಇಲ್ಲ.
ಮಿತವಿಲ್ಲ, ಚ್ಯುತಿಇಲ್ಲ, ಆನಂದದಾಶ್ರಯವು
ಅಲ್ಲಿಹುದು. ಧಾವಿಸುತಲಿಹುದಾತ್ಮ; ಬಂಧುಗಳೇ!
ಅನುಮತಿಯ ನಿತ್ತು ಕಳುಹಿರಿ, ಎಲ್ಲರೊಮ್ಮತದಿ.

[ಕೆಲವರು ಬಂಧುಗಳು ಬರುವರು]

ಬಂಧು — ಚಾಗದಲಿ ಬೀರದಲಿ ಕಲಿಕಾಲ ಕರ್ಣನೆನೆ
ಪೇರೆಸೆದನೀ ರವಿಗ; ನಿನ್ನ ಬಹು ಕಾಲಕ್ಕೆ
ಪಡೆದಿಹನು; ಭುವಿಗೆ ಸಮ ತಾಯ್ತಂದೆಗಳ ಪ್ರೇಮ.
ತೂಗಿ ನೋಡಮ್ಮ ನೀಮನದಿ, ಮತಿವಂತೆ.

ಬಂ — ಎಂದು ಮರುಗಿದಳಿಲ್ಲ. ಅಳಲಿನನುಭವಬೇಕೆ
ಈ ಮಾತೆಗಿನ್ನು; ಪಡೆದೊಡೆಲ ನೀ ಬಗೆದೆಯಾ?

ಬಂ — ನಾಡಭಾಗ್ಯವು ನೀನು, ನಾಡಿಗಾಧಾರವಲೆ?
ಆದರವನಿಡು ನಿನ್ನ ಜನರಿಗಭಯವನೀಡು.

ಬಂ — ನನ್ನಿ ಗುವರಿಯೆ, ನಿನ್ನ ಪಡೆಯಲೀ ಪೊನ್ನಬ್ಬೆ
ಎನಿತು ವ್ರತನೇಮಗಳನೆಸಗಿ ಬಳಲಿದಳೋ!

ಬಂ — ನಾಡ ನಗೆಯನ್ನುಳಿಸು, ಜಸವ ಪರ್ಬಿಸು, ತಾಯೆ.
ದೇ — ನಾಡ ಜಸ ಪರ್ಬುವುದು. ನಾಡಿಗಿದು ಮರ್ಯಾದೆ.
ಕುಲ, ಶೀಲ, ಬಲುಹು, ಬಿನ್ನಾಣ ದೈಸಿರಿಗೆ ದೊರೆ;
ಕುಡಿಯರಾಭರಣ; ನುಗುನಾಡ ರಾಯನ ಕುವರಿ.
ಕಲಿಚಾಗಿ ಏಚಂಗೆ ಕುಲ ಸತಿಯು ನಾನಾಗಿ,
ಕೊಟ್ಟು ಕೊಂಡರ ಮನೆಗೆ ಮಾತ ನಾ ತರುವೆನೆ?
ಮನೆವೆಸರ ತೊಡೆವೆನೇ? ಎಲ್ಲರಿಚ್ಛೆಯ ಮೀರಿ
ಸತ್ಯಕ್ಕೆ ಶರಣಾದೆ. ಆತ್ಮ ಸಾಕ್ಷಿಯೊಳೊರೆವೆ
ಸರ್ವರಾಲಿಪುದೆನ್ನ ಕಡೆಯ ಬಿನ್ನಪವ.
ವೀರಸತಿಗುಚಿತವಾದಾಚಾರವೆಸಗಲಿಕೆ
ಸಮ್ಮತಿಸಿ ಕರುಣದಲಿ, ಕಳುಹುವುದು ಸಂತಸದಿ.
ಅಣಿಮಾಡಿರೆಲ್ಲವನು, ಕೈಮುಗಿದು ಬೇಡುವೆನು.
ರ — (ಪೊನ್ನಬ್ಬೆಯನ್ನುದ್ದೇಶಿಸಿ) ಸುತೆಯ ಚಲವೆಂತೆಯು
ನಿವಾರಿಸಲಿಕಾಗದಿದೆ.
ಇನ್ನೇನನೆಸಗುವೆವು? ಕಡು ಮೋಸವಾಯ್ತೇ!
ದೇ — (ತಂದೆ ತಾಯ್ಗಳ ಕಾಲ್ಗೆರಗಿ) ದಾನವಿತ್ತಿರಿ ಅಂದು
ಕುರುವಂದ ಮನೆತನಕೆ.
ಇಂದದನು ಪೂರ್ಣವಾಗಿಸಿರಿ ತಾಯ್ತಂದೆಗಳೇ!
ಪ್ರಿಯವೆಂದು ಮತ್ತದನು ಸ್ವೀಕರಿಸೆ ಸಲ್ವುದೇ?
ಪ್ರಿಯವಾದುದನ್ನೀವರುತ್ತಮರು ದಾನಕೆ;
ನಿಮ್ಮ ಸತ್ಕೀರ್ತಿಯನು ಬೆಳಗಿರೀತ್ಯಾಗದಲಿ.
ರ — ನಿಶ್ಚಯವು ನಿಶ್ಚಲವೆ? ಮೂಣಲೊಲ್ಲೆಯ ಮಗಳೆ?
ದೇ — ಮತಿಯೊಂದೆ; ಮಾತೊಂದೆ; ಬಯಕೆಯೊಂದೇ ತಂದೆ!
ಪರಹಿತಕೆ ಪಿರಿಯರಭಿಮತದೊಳಿಲ್ಲ ವಿರೋಧ.
ವೈರಾಗ್ಯನಿಧಿ ನೀನು ತಾಯೆ! ಅಳಲದಿರು,
ಕಳುಹಬೇಕೆನ್ನ ಪತಿಸನ್ನಿಧಿಗೆ.
ಪೊ — ವಿಧಿಯೇ!
ಏನನೆಸಗಿದೆ ನೀನು? ಜಗದೊಳಾಸೆಯು ಬಲಿಯೆ

ಕೊಟ್ಟೆಯೋ ಈ ಸುತೆಯ, ಶೋಕದನುಭವಕಾಗಿ
ಆಯುವಿಟ್ಟೆಯೊ ನಮಗೆ.

ನೀ — (ಸಂತೈಸಿ) ಸೈರಿಪುದು ಸೈರಿಪುದು,
ಸೈರಣೆಯು ಸ್ವಂತಪುತ್ರಿಯು, ಬೆಳಸಿರಿನ್ನದನು.

ರ — ಕಡೆಗು ನಿನ್ನಯ ಚಲವೆ ಸಾಧಿಸಿದೆ. ಗೆಲಿದೆ.
ಒಳಿತು. ಮಗಳೇ ! ನಿನಗೆ ಒಳಿತಾಗಲೆಂದೆಂದು.
ದೈವಚಿತ್ತವಿದೇನೊ ! ಕೈಯಾರೆ ಲಾಲಿಸಿದೆ ;
ಮುದ್ದಿಸಿದೆನಂದೀಗ ಕೈಯಾರೆ ಬಲಿಗೊಡುವ
ದೌರ್ಭಾಗ್ಯವೊಂದಿರುವೆ.

ಪೊ — ಹಾ ಕೆಟ್ಟಬದುಕೇ.
ಮಗಳಿಗಾದಿನದಿ ಬಿರಿದಂತೆ ಬಿರಿದೀಗಲೇ
ಭೂದೇವಿ ! ನಿನ್ನ ಬಸಿರಲಿ ಸೇರಿಸೆನ್ನನು.
(ಮೂರ್ಛೆಗೊಳ್ಳುವಳು)

ರ — (ದುಃಖದಿಂದ) ನೀಲೇ ಈ ದುಃಖಾರ್ತೆಯನು ಸಂತೈಸಿ
ಕರೆತನ್ನಿ

[ತೆರೆ ಜಾರುವುದು]

[ಊರ ಹೊರದಾರಿಯಲಿ ಮೆರವಣಿಗೆ. ಸತಿಯು ಸಿಂಗಾರದಲಿ ದೇಕಬ್ಬೆ.
ಹಿಂದೆ ಮುಂದೆ ಪ್ರಜೆಗಳು, ಬಂಧುಗಳು, ಕಡೆಯಲ್ಲಿ ನೀಲಬ್ಬೆ ಮಲ್ಲಬ್ಬೆಯರು]

ಪ್ರಜೆಗಳು — ಜಯ ಜಯ ಮಹಾ ಸತಿಗೆ, ಜಯ ವೀರ ಯುವತಿಗೆ,
ಜಯವೀರ ಸುತೆಗೆ ಜಯ ಜಯ ವೀರ ಸತಿಗೆ,
ಜಯ ಶೀಲವತಿಗೆ ಜಯ ಜಯ ಧೀರಮತಿಗೆ,
ಜಯ ಧರ್ಮಯುತೆಗೆ ಜಯ ಜಯ ಸತ್ಯವತಿಗೆ,
ವೀರ ಕುಡಿಯರ ವಂಶ ಪಾವನೆಗೆ ಜಯ ಜಯ,
ಶೂರ ಕುರುವನ್ದ ಕುಲ ಕೀರ್ತಿ ತಾರೆಗೆ ಜಯ.
(ಮುಂದೆ ಸಾಗುತ್ತಿರುವಾಗ)

ಮ — ನೀಲಬ್ಬೆ ; ಜನರೆನಿತು ಮರುಳರಾಗಿಹರಮ್ಮ.
ಏನಿವರ ಉತ್ಸಾಹ ! ಇದು ಒಂದು ಸಂಭ್ರಮವೆ ?

ನೀ — ಮರುಳಾಟವೆಂದೆಯೇ. ಅದರ ಸಂಭ್ರಮ.

ಮ — ಸಾಕು
ಸಾಕಾಯ್ತು ಕೇಳಲಿಕೆ. ಶೂಲದಂತಿದೆ ಕಿವಿಗೆ,
ಶಕ್ಯವಾಗದು ಸಹಿಸೆ.

ನೀ — ಸಹಿಸಲೇಬೇಕಲ್ಲ ;
ಈ ಮರುಳ ಸಂಭ್ರಮಕು ಉದ್ದೇಶವಿರಬೇಕು.

ಮ — ದುರಭಿಮಾನವಿದೆಲ್ಲ, ದುಷ್ಟಪದ್ಧತಿ, ಇದಕೆ
ಉದ್ದೇಶ ಬೇರೆಯೋ.

ನೀ — ನೀ ನಂಬದಿರಲೇನು
ಇದು ಘನೋದ್ದೇಶವೇ.

ಮ — ಘನವೆ, ಘನವೇ ನಿನಗೆ,
ಮತಿಗೆಟ್ಟತೇ ?

ನೀ — ಮಲ್ಲೆ. ಅಪ್ರಯತ್ನರು ನಾವು.
ಸಮಯಧರ್ಮವಿದೆಲ್ಲ, ಅಧೀನರಾವೆಲ್ಲ,
ಅನುಕೂಲರಾಗೆವು. ಮತ್ತೇನ ಗೈವೆವು ?
ಮೌನಸಮ್ಮತದಿಂದ

ಮ — ಅಂಗೀಕರಿಸಬೇಕೊ ?
ಶರಣಾಗಬೇಕೋ,

ನೀ — ಆರ ತಪ್ಪೇನಿಲ್ಲ.
ಇಂತಪ್ಪ ಸತಿಗೆ ಪ್ರಜೆಯಾಗಿರುವ ಪೆರ್ಮೆಯಲಿ,
ಲೋಕ ವಿಖ್ಯಾತಮಾದೊಂದು ಚರಿತೆಗೆ ತಮ್ಮ
ನಾಡು ಕಾರಣವಾದುದೆಂಬ ಸಂಬಂಧದಲಿ,
ಪೊರಮಡುತಲಿವೆ ಜನರ ಸಂಭ್ರಮೋತ್ಸಾಹಗಳು.

ಮ — ಪೊರಗೆಡುತಲಿದೆಯೆನ್ನ ಮಾನವರ ಸಿದ್ಧಾಂತ.
ನ್ಯಾಯವನು ವಂಚಿಸಿ, ದಯೆಯ ಧಿಕ್ಕರಿಸಿದೀ
ಹೇಯಾಶಯಗಳಿಂದ ; ಇದು ಘನೋದ್ದೇಶವೇ ?
ಏನು ಮಹಿಮೆ, ಇದೇನು, ಧರ್ಮಕೇ ದುರ್ಗತಿಯೆ ?
ನೀತಿಕಟ್ಟಳೆಗಾವ ಮರ್ಯಾದೆ ಸಲ್ಲುತಿದೆ ?

ನೀ — ಈಗ ನಿನಗರ್ಥವಾಗದು, ನಿದಾನಿಸು ತಂಗಿ.
ಶೋಕ ಸಂತಸಗಳಿಂತೇಕವಾಗಿದೆ ನೋಡು.
ಕಷ್ಟ ಸುಖ ವ್ಯತ್ಯಾಸ ಕಾಣದ ವ್ಯವಸ್ಥೆ ಇದು,
ಮೃತ್ಯುವಿಗೆ ನಾಡು ಪರಮೋತ್ತಮದ ಕಾಣಿಕೆಯ
ನೀಡುತಿದೆ. ತ್ಯಾಗಬಲದೊಂದು ತುಂಬುಪ್ರಮಾಣ
ಇಲ್ಲಿ ಕಂಗೊಳಿಸಿದೆ. ದೃಢವನಾಟಿಹದಿಟ್ಟ
ಮನದ ಮಹಿಮಾ ಕಾಂತಿ ಸುತ್ತಲೂ ಪಸರಿಸಿದೆ.
ಸಾರುತಿಹ ಸತಿರೂಪು ಜನರ ಕಣ್ಮನ ಸೆಳೆದು
ಜಗವ ನಾಚಿಸುತಲಿದೆ, ಮನವಿಟ್ಟು ನೋಡು.
ಮ — ಜಗದ ವಿಷಮಾವಸ್ಥೆಯೊಂದೆ ಕಾಣುವುದೆನಗೆ.
ಬಗೆ ಸಿಡಿಯುತಿದೆ. ಉರಿದು ಸೀಯುತಿದೆ ಎನ್ನೊಡಲು.
ಈ ಕ್ರಮದೊಳೆನಗೊಂದು ಪ್ರಿಯವಿಲ್ಲ, ಪ್ರಿಯವಿಲ್ಲ,
ಕ್ರೌರ್ಯದ ಮಹಾಭೂತ ಬಾಯ್ತೆರೆದು ಆರ್ಭಟಿಸಿ,
ಜಗದ ಕರುಣೆಯನೆಲ್ಲ ನುಂಗಿ ತೇಗುತಿದೆ;
ಆ ತೇಗಿನೂದು ನಮಗೀದುಃಖದುಚ್ಛ್ವಾಸ,
ಮೆಚ್ಚಬೇಕಲ್ಲವೇ ಮಹದನುಗ್ರಹವೆಂದು?
ನೀ — ಮೆಚ್ಚೊಂದುಕಡೆ, ಮರುಕ ಮತ್ತೊಂದುಕಡೆಯಾಗಿ
ಸುಖ ದುಃಖ ದಶ್ರುಗಳ ಕಂಗಳಿಗೆ ಭಾಗಿಸಿವೆ;
ಕೋಶಗಳ ನಾಶ್ರಯಿಸಿ ನಮ್ಮುಸಿರ ತುಂಬುತಿವೆ,
ಈ ಜನ ಮನಃಸ್ಥಿತಿಯ ವಿಂಗಡಿಸಿ ತೋರುತಿವೆ.
ಹರುಷ ಘೋಷವಮಾಡಿ, ಆನಂದ ಬಾಷ್ಪಗಳು
ಒಂದು ಕಣ್ಣಲಿ ತುಂಬಿ; ಮೌನ ಶೋಕದಲುಕ್ಕಿ
ಬರುವ ದುಃಖಾಶ್ರುಗಳ ಒಂದು ಕಣ್ಸುರಿಯುತಿದೆ.
ತಲೆ ಎತ್ತಿ ನೋಡೆಂದು ಹರ್ಷ ಬೋಧಿಸುತಲೇ
ತಲೆಬಾಗಿಸೆನುತಿದೆ ಶೋಕವಾ ಹಿಂದೆಯೇ.
ಬಲವಂತದಲಿ ಭಾರದಡಿದುಗಳೊಂದೊಂದು
ಮನದಯಾತನೆಯ ನೆಳೆದೆಳೆದು ಮುಂದಿಡುತಲಿವೆ.

ಮ — ಮನಕಾವುದೂಬೇಡ, ಎಲ್ಲ ಬಲವಂತವೇ.
ನೀ — ಕೆಲರು ದಿಗ್ಭ್ರಾಂತರು, ಕೌತುಕವು ಕೆಲರಿಗೆ,
ಮೌನವಾಂತಿಹರೆನಿಬರೋ ಶೂನ್ಯಭಾವದಲಿ.
ಮನದ ಬಿರುಗಾಳಿ ಎಬ್ಬಿಸಿ ವಿಚಾರೋದ್ವೇಗ
ತರಂಗಗಳುಕ್ಕಿ ಬಗೆದಡವ ಹಾಯುತಿವೆ.
ಸತಿಯ ಚಂದವ ನೋಡು, ತಲೆಯೆತ್ತಿ ನೋಡೊಮ್ಮೆ.
ಮ — ಮುಂದೇನೊ ಮುಗಿಸಿಬಿಡು.
ನೀ — ಮುಂದಿರುವ ಆತಾಣ
ಸತಿಗದು ಪರಂಧಾಮ. ಆಕಳೇಬರದೈವ,
ನೆನೆಭಯಂಕರವಶುಭವೆಲ್ಲ, ಶುಭವಾಸತಿಗೆ.
ದಿನ ದುರ್ದಿನವು ನಮಗೆ; ಪುಣ್ಯದಿನವಾ ಸತಿಗೆ.
ಮಸಣವರಮನೆಯಾಯ್ತು, ಮನೆ ಮಸಣವಾಯ್ತು.
ಚಿತೆಯುಸುಖತಲ್ಪವಾ ಸತಿಗೆ ತಲ್ಪವು, ನಮಗೆ
ಚಿತೆಯಾಯ್ತು.
ಮ — ಸಾಕಿನ್ನು ; ಬಣ್ಣಿಸದಿರಮ್ಮ.
ಸುಕುಮಾರ ಸುಂದರ ಶರೀರ, ಎಳೆಜವ್ವನ,
ಎನಿತು ಸಂಪದ, ವಿಭವ, ಪದವಿ, ಬಲವಿನಿತಿರಲು,
ಜನನಿ ಜನಕರು ಬಂದು ಅಂಗಲಾಚುತಲಿರಲು,
ಮನ ಕರಗಬಾರದೇ ? ಕಿರಿದೆ ಜನವಿಶ್ವಾಸ ?
ಜಗವನಿತು ಹೇಯವೇ ? ಇನಿದಲ್ಲವೇ ಬದುಕು ?
ಎನಿತುಜನ ಮರುಗುತಿಹರೊಂದು ಜೀವಕೆ ? ನೆಲವು
ಭರಿಸೆನೆಂದಿತೆ; ಒಂದೆ ಚಲವಿಡಿದಳಲ್ತೆ ?
ಭಂಗವೆನಿತಾಗಿ ಬಂದಿತೊ ನಿರಾಶೆಯ ಮನಕೆ !
ಈ ವಿಧದೊಳಾಯ್ತು ಪ್ರೇರಣೆ. ವೀರಪಂಥವಿದು
ಸತಿಯುರ ವಿಪತ್ತು.
ನೀ — ಇಂದೆಮಗೆ ಸಂಬಂಧವೀ
ದುಃಖವದರಿಂದೆನಿಸುತಿಹುದಿಂತು. ಇನ್ನಿದಕು
ಮುನ್ನಮಿದನೆಸಗಿದರಿಗೆಲ್ಲ ಮರುಗುವೆವೇ ?

ಮ — ಆಚಾರ ಶಾಸನಗಳಿಂತಾಯ್ತು ಪರಿಣಾಮ.
ಹಾನಿಯನೆ ಹವಣಿಸುವ ರೂಢಿಯಿದು ಸಾಧುವೇ?
ದುಷ್ಟ ಸ್ವಭಾವದಲಿ ಜಗವ ಕೆಡಿಸುತಲಿರುವ
ಕ್ರೂರಶಕ್ತಿಗಳೆನಿತು ಕಾಲವಿರಬೇಕಿನ್ನು?
ವಿರಮಿಸಲು ಬಾರದೇ?
ನೀ — ಆವೇಶ ವಿಳಿಸಮ್ಮ;
ಕ್ಷಾತ್ರಬಲ ಪೂರ್ಣವೀ ಬಲಿದಾನ, ಇದನೆಸಗೆ
ನಿಯಮೋಪದೇಶಗಳ ನಿರ್ಬಂಧವೇನಿಲ್ಲ.
ಮನವೇ ಪ್ರಧಾನ. ಆ ಶಕ್ತಿಯೇ ಸರ್ವಸ್ವ,
ಆ ಪ್ರಯೋಗಕೆ ಎಂದು, ಅಪಜಯವೆ ಇಲ್ಲ.
ಉದ್ಧಾರವೀ ವಿಜಯ, ಶುದ್ಧಾತ್ಮ ಸಿದ್ಧಿಯಿದು,
ಧನ್ಯಳಾದಳು ನಮ್ಮ ಗೆಳತಿ.
ಮ — ಎಲೆ ದುರುಳೇ!
ಕೆಳೆಯ ಅಗಲಿಕೆಯೆ ಪ್ರಿಯವಾದುದೋ ನಿನಗೆ?
ಇದಕೆ ನೀನನುಕೊಲೆಯಲೆ ಅವಿಶ್ವಾಸಿ!
ಈ ದುರಂತ ಲಿ ಅಭಿಮಾನವೇ ನಿನಗೆ?
ನೀ — ನಿನ್ನಿಷ್ಟದಂತೆಯೇ ಕ್ರಮದಲೀವಿಧಮೆಲ್ಲ
ಕಾಲಾನುಸಾರದಲಿ ಬದಲಾಗದಿಹುದೇ?
ಸತ್ವ ಬಲಪೂರ್ಣದಾ ಸಹನಾಪ್ರಧಾನದಾ
ಸ್ಥೈರ್ಯಾವಲಂಬನದ ಜಗದುದಯವಾಗುವುದು.
ಸಾವಧಾನದಲಿಹುದು ಸಾತ್ವಿಕ ಸಮಾಧಾನ.
ಇಂದಿನಭಿಮಾನ ನಂಬುಗೆಯ ವಶ ನಾವೆಲ್ಲ.
ಅಧೀರಳಾಗದಿರು ನೋಡಲ್ಲಿನಾಚಿತ್ರ.
ಅತಿ ವಿಚಿತ್ರಸ್ಥಿತಿಯ ಮನದ ತಲ್ಲೀನತೆಯು,
ಭಕ್ತಿ ಪರವಶತೆಯಾ ಮುಕ್ತಿಭಾವವ ನೋಡು.
ಪರಿಶುದ್ಧ ಜೀವಿಗಳ ಪರಮಾವಧಿಯು ನೋಡು.
ಮೆಚ್ಚೀ ಮಹಾಸತಿಯ ಜಯವೆನ್ನು, ಜಯವೆನ್ನು,
ವೈರಾಗ್ಯ ತುದಿಹಂತ ವೇರಿಹುದು ನೋಡಲ್ಲಿ.

ಮ — ನುಡಿಯುತಾ ನಡೆಯು ಪಿಂದಾಗುತಿದೆ ನೀಲೇ !
ನೀ — ಮನವು ಸ್ವಾಧೀನ ತಪ್ಪುತಲಿಹುದು ನಡೆ ಮುಂದೆ.
ಮ — ನಾನಡೆಯಲಾರೆನೇ ! ಕೈಹಿಡಿದುಕೋ ನಿಲೇ !

ಪ್ರವೇಶ ೩.

[ಊರ ಹೊರಗೆ ದೇಗುಲದ ಮುಂದೆ ಕೊಂಡದ ಬಳಿ ಬಂಧುಗಳು]

ಬಂಧು — ಬನ್ನಿರೋ ಬೇಗ, ಜಯವಾದ್ಯಗಳ ದನಿಯದೋ
ಸನಿಯದಲೆ ಕೇಳಿಬರುತಿದೆ;
ಬಂಧು — ಸಾರಿಬರುತಲಿದೆ
ಜನಸಮೂಹವು ನಾಲ್ಕು ದೆಸೆಗಳನು ಮುತ್ತಿ
ಬಂ — ಮದುವೆಯುತ್ಸವದಿಂದೆ ಪಿರಿದಾಯ್ತು ಜನಕೂಟ.
[ಬಂದು ಹೋಗುವ ದಾರಿಗರು ತಿರುಕರು ಕೆಲರು]
ದಾರಿಕ — ಏನಿಲ್ಲಿ ಮದುವೆಯೇ?
ಬಂ — ಮುಂದಿನೂರಿಗೆ ಹೋಗು.
ಮತ್ತೊಬ್ಬ — ಉರಿಯೇಕೆ ಯಜ್ಞವೇ?
ಬಂ — ಅಹುದು ದಾರುಣ ಯಜ್ಞ.
ಬಂ — ಸ್ವರ್ಗವಾಸವು ಬೇಕೆ, ಬೇಡವೇ, ದಾರಿಬಿಡು.
ತಿರುಕ — ಅನ್ನ ವಿಡುವಿರೆ ಇಲ್ಲಿ?
ಬಂ — ಆನಂದ ಸಮಯವಿದು,
ಅನ್ನದಾನವೆಯೇಕೆ, ಎಲ್ಲ ದಾನಗಳುಂಟು.
ದಾರಿಗ — ವಿಶೇಷವೇನಿಲ್ಲಿ?
ಒಬ್ಬ — ಈ ಸಂಗತಿಯು ಬೇರೆ
ನಮಗೇಕೆ ಬಾರಣ್ಣ. (ಹೋಗುವರು)
ಒಬ್ಬ ಬಂಧು — ಏನಿಲ್ಲಿ ವ್ಯವಹಾರ?
ಕಜ್ಜವೆಲ್ಲವ ಮರೆತು ಇಂತೇಕೆ ಒರಲುವೆ?
ಬಂ — ಜನರ ಲೋಭವ ನೋಡು.
ಬಂ — ಏನು ಪೋದುದು ನಿನಗೆ,

ಬಂ — ಬರಿದೆ ಕಾಡುವರಲ್ಲ, ತಮ್ಮ ಪಾಡನು ತಾವು
ನೋಡಿಕೊಳಬಾರದೇ? ಕೆಲಸವಿಲ್ಲದರಿವರು,
ಅಲಸಿಗರು.

ಬಂ — ಪೋಗುವರು, ನುಡಿಗೇನು ಬರಬಂತು?
ಇನಿತು ಬೇಸರವೇಕೆ? ಮಂದಿ ನಗುತಿಹರಲ್ಲ.
ನಿನಗೇನು ಸಂತಾಪ? ಏಳು, ಕೆಲಸವ ನೋಡು.

ಬಂ — ಸ್ವಚ್ಛಗೊಳಿಸಿದೆ ರಂಗ, ಇಲ್ಲಿ ತಂದಿರಿಸಿರಿ
ಮದವಳಿಗೆ ಕಲ್ಲ; ಮಂಗಳ ವಸ್ತುಗಳ ತನ್ನಿ,
ಚಿತೆಯ ಸವರಿಸಿ, ಕೆಲವು ಸತಿಯರನು ಕರೆತನ್ನಿ;

ಬಂ — ಸತಿ ಪ್ರಶಸ್ತಿಯನಾರು ಪಾಡುವರು.

ಬಂ — ಪೋಗೀಗ
ಮಲ್ಲಕವಿಯನು ಕರೆದು ತನ್ನಿ ಜಾಗ್ರತೆಯಲಿ.

(ವಾದ್ಯಗಳು ಮೊಳಗುತ್ತಾ ಜಯಕಾರಗಳೊಂದಿಗೆ ಸತಿಯನ್ನು ಕರೆತರುವರು)

(ಚಿತೆಯೊಡ್ಡಿದೆ, ಏಚನ ಕಳೇಬರವಿಟ್ಟಿದೆ. ಎಲ್ಲರೂ ಜಯಘೋಷ ಮಾಡಿ ಹೂಗಳನೆರಚುವರು)

ಜಯವೀರವರ ಧನ್ಯ! ಕುರುವನ್ದ ಕುಲ ರತ್ನ,
ವೀರಪಟ್ಟವನೇರು ದೇವಲೋಕದಿ ಸುಖಿಸು.

ಬಂಧು — ವೀರ ಸತಿಯಾಗಲೀ ಧೀರಮತಿಯನುಹರಸಿ.
ಪೆತ್ತವರೆ ಬನ್ನಿ, ಬಂಧುಗಳೆಲ್ಲ ಬನ್ನಿರಿ,
ವೀರ ಪದ್ಧತಿಯ ಬಲ್ಲರೆ ಬನ್ನಿರಿತ್ತ.

ರವಿಗ — ಬಾ ಮಡದಿ! ಸುತೆಯ ಕಡೆನೋಟವಿದು ಮುಗಿಸುವ.

ಪೊನ್ನಬ್ಬೆ — ಅಕಟಾ! ಇಂತೆಮ್ಮ ಕೈಬಿಟ್ಟೆ ಕೈಬಿಟ್ಟೆ
ದೇಕಲೇ! ಪತಿಸದನವೈದುವಂದೀತವರ
ಅಗಲಲೆನಿತೋ ಕಷ್ಟವಾಗಿತ್ತು; ನಡೆಯಂದು
ತಡೆದಿತ್ತು; ಇಂದದೇ ಬಲುವೇಗವಾಯಿತು.
ಎಲ್ಲ ಬದಲಾಗಿ ಅಭಿಮಾನವೇ ಪೊರತಾಯ್ತು.
ಪೋಗಿಬಾರೆಂದೆನುವ ನುಡಿಗಿಲ್ಲಿ ಬಲವೆಲ್ಲಿ;

ಬಾರೆನಲು ಬಾಧ್ಯತೆಯದೆಲ್ಲಿ? ಪೋಗೆಂದೆನಲು
ಬಾಯಿಲ್ಲವೇ ಕಂದ, ಎಂತು ಕಳುಹಲಿ ನಿನ್ನ ?

ಬಂ — ಶೋಕವನು ತಡೆದು ಸಮ್ಮತದಿಂದ ಬೀಳ್ಕೊಂಡು
ನಾಕವನು ಸಾರ್ವ ಸುತೆಯನು ಪರಸು ತಾಯೇ.

ಪೊ — (ಮಗಳ ಬಳಿಗೈದು ಮುಡಿದಡವಿ ಮಂಗಳ ವಸ್ತುಗಳ ನೆರೆದು)
ಮಗಳೆ ! ನೀನಜಿತೆ; ಸಚ್ಚರಿತೆ; ಪತಿವ್ರತೆ; ವೀರ
ಸತಿಯಾಗು ; ಸುಖಿಯಾಗು ; ಸಗ್ಗಿಯಾಗು.

ರ — ತಥಾಸ್ತು,
ಶ್ರೇಯೋಸ್ತು, ಸುಕೃತಿ ನೀ ಧನ್ಯಾತ್ಮಳೌ ಮಗಳೆ !
ದ್ಯುತಿಯಾಗು ; ಧ್ರುವೆಯಾಗು ; ಚಿರ ತಾರೆಯಾಗು.
ಶುಭಮಕ್ಕೆ ಸರ್ವದಾ ಸರ್ವ ಹಿತಮಕ್ಕೆ,
ಶಾಂತಿಯೊಂತಿರು ಸದಾ.

ನೀ — ನಗೆ ನಿಚ್ಚವಾಗಿರುವ,
ವಿಭವಪೆರ್ಚುತಲಿರುವ, ಜಗವೇರು ವೀರಸತಿ !
ಭ್ರಮೆಯೆಲ್ಲ ಮೆಟ್ಟಿದೆ, ಮಹಾಸಿದ್ಧಿಯಡರಿತು.
ಚಿತ್ಕಳೆಯೊಳಿರುವ ಚಿರ ನೆಮ್ಮದಿಯನ್ನೈದಿರು.

ಮ — ಸುಖನಿರಂತರವಾಗೆ ಸುರಸಿರಿಯ ಭೋಗಿಸು.
ಸಗ್ಗದಾ ಸಂಭ್ರಮದಿ ಬೆರೆದಿರು, ಮರೆಯದಿರು.
ಆಗಾಗ ನೆನೆ ನಮ್ಮ ನಾದಾಗ ನೋಡುತಿರು.

ದಂಡ — ಬೀರದರಸಿರಿಯೊಂದಿ ಮೆರೆವಂತೆ ನಿಚ್ಚ
ಸಾರುವುದು ಸಾಯುಜ್ಯದುಚ್ಚ ಪದವಿಯನು.

ಬಂಧು — ಶುಭದ ಪ್ರೇಮದ ನಿಧಿಯೆ, ವೀರಸತಿಯಾಗು.

ಬಂ — ಸುಗುನಾಡ ರನ್ನವೇ, ನವಿಲೆನಾಡಿನ ದೇವಿ,
ಉಭಯವಂಶೋದ್ಧಾರಿ, ವಿಶ್ವಾಸಧಾರಿಣೀ !
ಮೂರು ಲೋಕದಿ ಬೆಳಗು ನಿನ್ನ ಬೆಳ್ಜಸವ.

ಸತಿಯರು — ನಿತ್ಯ ಸೌಭಾಗ್ಯ ಸಂತೃಪ್ತಿ ನಿನಗಾಗಲಿ,
ಸತ್ವಶಾಲಿನಿಯೇ ! ನಿನ್ನ ಸೌಮಂಗಲ್ಯ

ಸತಿಕೋಟಿಗೆಂದೆಂದು ಶುಭವೀವ ನೆನಪಾಗಿ,
ತೇಜವಕ್ಷಯವಾಗಿ, ನಲಿದು ನರ್ತಿಸುತಿರಲಿ.

ಎಲ್ಲರೂ — ಜಯ ಜಯ ಮಹಾಸತೀ! ಪತಿಲೋಕವೊಂದು,
ವೀರ ಸತಿಯಾಗು, ವೀರ ಸತಿಯಾಗು.

[ಕವಿ ಮಲ್ಲನು ಪ್ರವೇಶಿಸುವನು]

ಬಂಧು — ಕವಿ ಮಲ್ಲ, ಬಾ, ಪಾಡು, ಈ ಸತಿಪ್ರಶಸ್ತಿಯನು.

ಮಲ್ಲ — ನುಗುನಾಡ ರಾಮಂಗೆ, ಕಲಿಕಾಲ ಕರ್ಣಂಗೆ
ಕುಡಿಯರಾಭರಣಂಗೆ ಮಡದಿ ಪೊನ್ನಬ್ಬೆ.
ಕಲಿಕಾಲ ಸೀತೆಯೆನೆ ಪೇರೆಸೆದಳಾಕೆಯಲಿ
ಜನಿಸಿದಳು ದೇಕಬ್ಬೆ ದೇವಕಿಯೆ ಬಂದಂತೆ.
ಸತಿಗೆ ಸಮರಿಲ್ಲವೆನೆ ಜೀವನವ ಸಾರಿ
ಸಾರವೆರೆದಳು. ಯಶೋಭಾನುವೆನೆ ಪೆಂಪೆಸೆದ
ಕುರುವನ್ದ ಕುಲದ ಕಲಿಕಾಲವೇಳನು ಏಚ,
ಅರಸುಗೈದನು ನವಿಲೆನಾಡ ಸೊಗಮಿರ್ದ್ದ.
ಆಳ್ದಳಾತನ ಬಗೆಯನಬಲೆ ಕೈವಿಡಿದು.
ಅನುಪಮ ಸುಶೀಲದಲಿ ನಿರ್ಮಲ ಪ್ರೇಮದಲಿ
ಈ ಪಾವನೆಗೆ ಸಾಟಿ ಸತಿಯರಿನ್ನುಂಟೇ?
ಆಶೆಯಿಂದಲೆ ಶೋಕ, ಶೋಕವೆಂಬುದೆ ನರಕ;
ಅದನು ಜಯಿಪುದೆ ನಾಕವೆಂದೇಕ ಚಿತ್ತದಲಿ
ಇಳೆಯ ಬಾಳೊಗೆದು, ಪ್ರಿಯಪತಿಯೊಡನೆ ತೆರಳಿದೀ
ಚರಿತೆಯದ್ಭುತವಾಯ್ತು, ಪತಿಭಕ್ತಿ ವಿಜಯಿಸಿತು.
ವಿಶ್ರುತವು ಜಗಕೆಲ್ಲ, ಸತ್ಯ ಸಂಪದ್ವಿಭವ.
ಊರ್ಜಿತ ಪರಂಪರೆಗೆ, ಈ ಸತೀತ್ವದ ಮಹಿಮೆ
ವಿಕಾಸವಾಯ್ತಿಂತು. ಭಾವನೆಯ ಸುಳಿಮಿಂಚು,
ತಣ್ಬನಿಯ ತ್ರಾಣವದು, ರವಿಗ ನಾತ್ಮಜೆಯಾತ್ಮ
ಒಳ್ಪೆಸೆದು ರವಿಯಂತೆ, ದಿವಿಯಂತೆ, ಪವಿಯಂತೆ,
ಭುವಿಯೊಳುಜ್ವಲಿಸಲಿ. ಈ ಚರಿತೆ ಲೋಕದಲಿ
ಧರ್ಮ ಚರಿತೆಯು ಪೊಗಳುವಂತೆ ಚಿರವಾಗಲಿ.

ಬಂ— ದೇವರಿಗೆ ದತ್ತಿಯನು ಬಿಡಲು ಬಯಕೆಯದುಂಟೆ?
ದಾನಗಳ ದತ್ತಿಗಳ ನೀವುದೌ ಮನಸಾರ.
ಬಂ — ಏನ ಪೇಳಿದರದನು ಶಿರಬಾಗಿ ಸಲಿಪೆವು.
ದೇ — ನೆಲ, ಹೊನ್ನು, ಪಶು, ಧನ ವಿದೆಲ್ಲವನು ಮತ್ತೆಯು
ಪಡುವಲದ ಕಡೆಯಲ್ಲಿ ತೆಂಕಲಯ್ಗೊಳ ಬೆಳೆಯ
ಕಡುಗೊರ್ತು ಕೊಟ್ಟಿರುವೆ, ದೇವರಿಗೆ ಸಲಿಪುದು.
ಅನುಮತಿಯೆ ಎನಗಿನ್ನು ತಂದೆ ತಾಯಿಗಳೇ!
ಬಂಧುಗಳೆ! ಗೆಳತಿಯರೆ! ನಾಡಿಗರೆ! ಎಲ್ಲರಿಗು
ಕಡೆಯ ವಂದನೆ, ಪೋಗಿಬರುವೆ ಮರೆಯದಿರಿ.
ರವಿಗ — ಮಗಳೆ! ಧನ್ಯಳು ನೀನು, ಆತ್ಮ ಸಿದ್ಧಿಯ ಪಡೆದೆ.
ಕವಿಮಲ್ಲ. ಸುತೆಯ ಪೆಸರಿಳೆ ಶಾಶ್ವತದಲಿರೆ
ಶಿಲೆಯ ಬರಹವನಿಲ್ಲಿ ನಿಲಿಸು, ಬಾ. ಸತಿ, ನೀನು
ಇನ್ನಿಲ್ಲಿ ನಿಲ್ಲೆ ಸಲ್ಲದು ನಾವು.
ಪೊ — ಪೆಣ್ತನವೆ
ನಿನ್ನ ಬಾಳ್ಸುಡು. ಶೋಕದಾಶ್ರಯವೆ ನಿನ್ನ ಗತಿ
ನಿನ್ನ ಬಾಳಿನಲಿ ನಿನಗಾದರಣೆಯನ್ನಿರಿಸೆ
ಅವಕಾಶವಿಲ್ಲ. ಬಾಳ್ಗೊಂದು ಬೆಲೆಯೇ ಇಲ್ಲ.
ಪೆತ್ತರಿಗೆ ನೀ ಬೇರೆ; ನಿನಗೆ ನೀನೇ ಬೇರೆ.
ಜಗವನ್ಯ, ಜನವನ್ಯ, ನಿನ್ನದೆಂಬುದು ಶೂನ್ಯ.
ದುಷ್ಟ ಧರ್ಮಗಳೆಲ್ಲ, ಕ್ರೂರ ಕರ್ಮಗಳೆಲ್ಲ,
ಅಡಿಗೊಂದಪಾಯವನು ಹಂಚುತಿವೆ ನಿನಗೆ.
ಇನ್ನೆನಿತು ಕಾಲ ವಿಜಯಿಸಲೆಂದು ಬಗೆದಿರುವೆ?
ಮೋಸ ಪ್ರಪಂಚವೇ! ಇನ್ನೇಸು ಬಲಿದಾನ
ವಾಶಿಸುವೆ? ನಿರಪರಾಧಿಗಳೆನಿಬರನು ನುಂಗಿ
ಇನ್ನು ಸಂತುಷ್ಟಿಯಾನದೆ ಇನ್ನು ಬಯಸುತಿಹೆ.
ಈ ವಿಧಾನದಲಿನ್ನು ಉಳಿದಿರಲು, ಬಗೆಯುತಿಹೆ.
ಉಳಿವೆಯಾ ಈ ಕೆಟ್ಟ ಬಯಕೆಗಳ ಬೆಳಸಿ?
ಬಲಿವೆಯೊ, ನಿಲುವೆಯೊ, ಘೋರ ಜಗವೇ!

ಚಿಃ ! ಚಿಃ ! ಅನ್ಯಾಯ, ನಿನ್ನಾಶೆಯನ್ಯಾಯ,
ಧಿಕ್ಕಾರ ಧಿಕ್ಕಾರ ನಿನಗೆ.

ರ — ತಡೆ ತಡೆ ಮುಗುದೆ !
ಕುಪಿತಳಾಗಿಂತು ಶಪಿಸುವರೆ? ಸೈರಿಸು. ತಗದು.
ಕರುಳಯಾತನೆ. ಅಮಮ ! ಪ್ರಬಲಿಸಲು ಬೇಡದನು.
ಪೆಣ್ಣು ಪುಟ್ಟುವುದು ಕೊಡುವುದಕೆ, ಕಳೆವುದಕೆ.
(ಸಂತೈಸಿ ಕರದೊಯ್ಯುವನು)
ಅವನಿತ್ತ, ಅವನೊಯ್ದ, ಅವನಿಚ್ಛೆಗೆದುರಿಲ್ಲ.

ನೀ — ನಿಲಲಾಗದಿನ್ನಿಲ್ಲಿ ನಾವು ಪೋಗುವ ನಡೆ
(ಮಲ್ಲಬ್ಬೆ ನೀಲಬ್ಬೆಯರು ಅನುಸರಿಸುವರು)
[ಚಿತೆಯ ಪೊತ್ತಿಸಿ ಎಲ್ಲರೂ ಮುಗ್ಗುಲಿಗೆ ಸರಿದ ಮೇಲೆ]

ದೇ — (ಎದ್ದು ಕೊಂಡದ ಬಳಿಸಾರಿ ಕೈಜೋಡಿಸಿ ಸುತ್ತ ನೋಡಿ)
ಸೊಗಮಿತ್ತು ಜೀವನದೊಳಿಂಬೊಗೆದು ಇನ್ನೆವರ
ಮೆನ್ನ ಜೀವಾನಂದಕಾಧಾರಮಾಗಿರ್ದ
ಮಮತೆಯಾಗರವೆ ! ತಾಯ್ನೆಲವೆ ! ಕರುನಾಡೇ !
ನಗೆಯ ಬಗೆದೋರಿ ಜಯಭೇರಿಯನು ಬಾಜಿಸು.
ಒಲವಿನಾ, ಚೆಲುವಿನಾ, ಸುರತರುವು ನೀನಾಗಿ,
ನ್ಯಾಯ ಧರ್ಮಗಳೂರಿ ಬೇರಬಿಡು, ಜನಕೆಲ್ಲ
ಅಭ್ಯುದಯ ಫಲನೀಡು, ದಯೆಯ ತಣ್ಣೆರಳಾಗು.
ಕಣ್ಗೆ ಉತ್ಸವ, ಮನಕೆ ಉತ್ಸಾಹ, ಜೀವನದ
ಆದರ್ಶ ದರ್ಶನಕೆ ಆದಿಕಾರಣೆ ನೀನು.
ನಿರಂತರ ಖ್ಯಾತಿ ಯಾಂತು ಈ ವಿಶ್ವದಲಿ
ಪರಿಪೂರ್ಣ ಮಹಿಮೆಯುಜ್ವಲಿಸು, ರಾರಾಜಿಸು.
ಉದರದಲಿ ಬಂದೆ, ಮಡಿಲಲಿ ಬೆಳೆದೆ, ನಲಿದೆ,
ಕಳೆದೆನೆನ್ನಿರವ, ಈಗಲು ಬೆರೆವೆ ನಿನ್ನೊಳೇ.
ಕಲೆಯ ನಾಡೇ ಎನ್ನ ಮನಗೆಲಿದ ನಾಡೇ !
ಕರುನಾಡೆ, ನಿನಗೆ ಶುಭವಿರಲಿ, ಜಯವಿರಲಿ,
ಅಚ್ಚಳಿಯದಿರಲಿ ನಿನ್ನಯ ವಿಭವವೆಂದೆಂದು.

ನಿನಗಿದೇ ಕಡೆಗೆ ಕೈಮುಗಿವೆ. ಕಡೆನೋಟವಿದು,
ಕಣ್ದಣಿಯ ನೋಡುವೆನು ಜನುಮ ಭೂಮಿಯೆ ನಿನ್ನ.
ನೀಡನುಮತಿಯ ನಿನ್ನು, ಪೋಗಿ ಬರುವೆ.
ಹರ ಹರ ಮಹಾದೇವ! ಬುದ್ಧಿ ನೀಡಿದೆ ನೀನು,
ಸಿದ್ಧಿಯನು ಕರುಣಿಪುದು, ಪತಿಪದವ ತೋರಿಸು.

(ಕೊಂಡಕೆ ಹಾರುವಳು)

[ಬಂಧುಗಳು ಮುಂದೆಬಂದು ಮೇಲೆ ನೋಡುತ್ತಾ]

ಬಂ— ನೋಡಿದಿರೆ ಮಹದಚ್ಚರಿಯ ಸಾಹಸವನು!
ಸಾರುತಿಹರಲ್ಲಿ ಸುರವಿಮಾನವನ್ನೇರಿ
ಸಗ್ಗದ ಮಹಾವೀರ ಸಾಮ್ರಾಜ್ಯ ಪಟ್ಟಕೆ.

ಬಂ— ಬರಿದೆ ಬಾಳಿದೊಡಾಯ್ತೆ? ಜಗದ ಕೊಂಡಾಟದಲಿ
ಬಾರದಿಹ ಬಾಳೇಕೆ?

ಬಂ— (ತಲೆದೂಗುತ್ತಾ) ಬಾಳು ಸಾರ್ಥಕವಾಯ್ತು.

(ಹೋಗುವರು)

[ಮಲ್ಲಕವಿ, ಮುನಿವರಸಿಂಗ]

ಮ — ಸತಿಯ ಪಟ್ಟದ ಕಲ್ಲ ತಂದಿಲ್ಲಿ ನಿಲ್ಲಿಸಿ, (ಕಲ್ಲನಿಲಿಸುವರು)
ಮುನಿವರಸಿಂಗ ಬರೆಯೆ ಬಾ. ಶಾಸನವ
ಲಿಖಿಪಂತೆ ಆಣತಿಯ ನಿತ್ತಿಹನು ನಮ್ಮರಸ.

[ಮಲ್ಲಕವಿ ಹೇಳುತಿರಲು ಸಿಂಗನು ಬರೆಯುವನು]

ಶಾಸನ ಸ್ಥಾಪನೆ

[ನೀಲಬ್ಬೆ ಮಲ್ಲಬ್ಬೆಯರು, ಹಾಲು ಫಲ ಪೂಜಾ ವಸ್ತುಗಳೊಂದಿಗೆ ಕಣ್ಣನೊರೆಸಿಕೊಳ್ಳುತ್ತಾ ಬರುವರು.]

ಮ — ಗೆಳತಿ! ದೇಕಬ್ಬೆ, ಸತಿಪದವ ನೀಸಾರಿದೆ
ತಾಯ್ತಂದೆಗಳ ಕಳೆದು ತಬ್ಬಲಿಗಳಾವಲ್ಲ.
ಕೈವಿಡಿದು ಪೊರೆದೆ ಕೈಬಿಟ್ಟು ತೆರಳಿದೆ. ಇಂದು
ನಿಜವಾಗಿ ತಬ್ಬಲಿಗಳಾಗಿಹೆವು. ನಿಜವಾಗಿ,
ಜಗವಿನಿದೆ ನಮಗಿನ್ನು? ನಿನ್ನನಗಲಿದೆವು.
ಆರು ನುಡಿಸಲಿಬೇಕು? ಆರ ನುಡಿ ಬೇಕಿಹುದು?

ನೀ — ನೀನಿಲ್ಲ ಸಖಿ ! ನಿನ್ನ ಅಭಿಮಾನ ಬಲವೊಂದೆ
ನಾವಿದ್ದ ಪರಿಯೆಲ್ಲ. ನೋವ ನರಿಯದೊಲೆಮ್ಮ
ನೀ ಸಲಹಿ, ನಿನಗೇನನೆಸಗದಿದ್ದರು ನಮ್ಮ
ಸಕಲ ಸುಖದನುಭವಕೆ ಮೂಲವೆಂದೆನಿಸಿರ್ದೆ.
ಒಲವೆಲ್ಲಿ! ಬಲವೆಲ್ಲಿ ! ಸಖಿ! ಎಲ್ಲ ನಿನ್ನಲ್ಲಿ.

ಮ — ಸತಿಯ ಸಂಬಂಧವಿಹುದೇನಿರಲಿ ನೀಲೇ !
ಅತಿ ಪ್ರೀತಿಯಾಗುವುದು. ಈ ಸ್ತಂಭವೇ ನಮ್ಮ
ಸತಿಯ ಪ್ರತಿರೂಪವೆಂಬಂತೆ ತೋರುವುದು.

ನೀ — (ಸ್ತಂಭವನ್ನಪ್ಪಿ)
ಸತ್ಯವಾವುದೋ? ಸತ್ವವೆಂತೆಂತು ನೆಲಸುವುದೋ,
ನಿರ್ಜೀವವೆನಲಹುದೆ ಈ ಶಿಲೆಯ? ಆ ಸತಿಯ
ಮಹಿಮೆಗಿದು ಸಾಕ್ಷಿ, ನೆನಪಿನ ಬಂಧು. ತಂಗೀ !
ನಮ್ಮ ಭಾಗ್ಯವು ನಮಗೆ ನಿಜದ ದೇಗುಲವಿದು.
(ಶಾಸನಕ್ಕೆ ಮೊಣಕಾಲೂರಿ ಅಂಜಲಿಯರ್ಪಿಸುವರು)

! ಪರಿಸಮಾಪ್ತಿ !